!KAVP210001362017

Presented on : 15-06-2017
Registered on : 15-06-2017
Decided on : 08-07-2026

**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,

ಬಸವನ ಬಾಗೇವಾಡಿ .

-:ಉಪಸ್ಥಿತರು:-

ಶ್ರೀ ಈರಪ್ಪ ಢವಳೇಶ್ವರ್ ಬಿ.ಎ. ಎಲ್.ಎಲ್.ಬಿ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,

ಅಸಲು ದಾವಾ ಸಂಖ್ಯೆ: **178/2017**

ದಿನಾಂಕ: **8** ನೇ ಜುಲೈ **2026**

ವಾದಿ/ಯರು:

1) ನಿಂಗಪ್ಪ ತಂದೆ ಲಕ್ಷ್ಮಣ ಆಲೂರ
ವಯಾ: 65 ಉ: ಒಕ್ಕಲುತನ
ಸಾ: ಹುಣಶ್ಯಾಳ ಪಿ.ಬಿ. ತಾ: ಬಸವನ ಬಾಗೇವಾಡಿ

(ಪ್ರತಿನಿಧಿಸುವವರು: ಶ್ರೀ ಜಿ. ಬಿ.ಬಿ , ನ್ಯಾಯವಾದಿಗಳು)

-ವಿರುದ್ಧ-

ಪ್ರತಿವಾದಿ/ಯರು:

1) ರಮೇಶ ತಂದೆ ನಿಂಗೋಂಡಪ್ಪ ಮುಳವಾಡ
ವಯಾ: 38 ಉ: ಒಕ್ಕಲುತನ
ಸಾ: ಹುಣಶ್ಯಾಳ ಪಿ.ಬಿ. ತಾ: ಬಸವನ ಬಾಗೇವಾಡಿ

2) ಶ್ರೀಧರ ತಂದೆ ಭೀಮನಗೌಡ ಆಲೂರ
ವಯಾ: 42 ಉ:ನೌಕರಿ
ಸಾ: ಹುಣಶ್ಯಾಳ ಪಿ.ಬಿ. ತಾ: ಬಸವನ ಬಾಗೇವಾಡಿ
ಹಾ:ವ: 32 ವಂದಾನಕೋಶಲ್ 4 ನೇ ಮುಖ್ಯ ರಸ್ತೆ
ಅನುಗ್ರಹ ಲೇಔಟದ 2 ನೇ ಹಂತ ಬಿಳಿಹಾಳ ಹಳ್ಳಿ
ಬಿ.ಟಿ.ಎಮ್ ಲೇಔಟ್ 2 ನೇ ಹಂತ ಬೆಂಗಳೂರು-76

( 1 ನೇ ಪ್ರತಿವಾದಿಯನ್ನು ಪ್ರತಿನಿಧಿಸುವವರು: ಶ್ರೀ ಎಸ್.ಎಸ್. ಎಚ್, ನ್ಯಾಯವಾದಿಗಳು)
( 2 ನೇ ಪ್ರತಿವಾದಿಯನ್ನು ಪ್ರತಿನಿಧಿಸುವವರು: ಶ್ರೀ ಟಿ. ಎಸ್.ಜಿ , ನ್ಯಾಯವಾದಿಗಳು)

| | | | | |
|---|---|---|---|---|
| 1 | ದಾವಾ ದಾಖಲಿಸಿದ ದಿನಾಂಕ: | 15.06.2017 | | |
| 2 | ದಾವಾ ಸ್ವರೂಪ | ಶಾಶ್ವತ ನಿರ್ಭಂದಕಾಜ್ಞೆಯ ಪರಿಹಾರ ಕೋರಿ | | |
| 3 | ಪ್ರತಿ ಮಾಗಣಿ | ಸ್ವಾಧೀನತೆ ಹಾಗೂ ಶಾಶ್ವತ ನಿರ್ಭಂದಕಾಜ್ಞೆಯ ಪರಿಹಾರ | | |
| 3 | ಸಾಕ್ಷಿ ವಿಚಾರಣೆ ಪ್ರಾರಭಿಸಿದ ದಿನಾಂಕ | 09-12-2021 | | |
| 4 | ತೀರ್ಪನ್ನು ಉದ್ಘೋಷಿಸಿದ ದಿನಾಂಕ | 08.07.2026 | | |
| 5 | ತೆಗೆದುಕೊಂಡ ಅವಧಿ | ವರ್ಷ | ತಿಂಗಳು | ದಿನಗಳು |
| | | 09 | 00 | 23 |

## -ತೀರ್ಪು-

ವಾದಿಯು ಪ್ರಸ್ತುತ ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಅನುಸೂಚಿತ ಸ್ವತ್ತು ಹುಣಶ್ಯಾಳ ಗ್ರಾಮದ ಪಿ.ಬಿ. ಗ್ರಾಮದ ಕ.ಸ.ನಂ: 51/2 ಕ್ಷೇತ್ರ 3 ಎಕರೆ ಸದರಿ ಜಮೀನದ ಪಶ್ಚಿಮ ದಂಡೆಗೆ ಹಾತ ನಕಾಶೆಯಲ್ಲಿ ತೋರಿಸಿದ "ಎಮ್.ಎನ್." ಒಡ್ಡನ್ನು 1 ನೇ ಪ್ರತಿವಾದಿಯು ಕಡಿಯುವುದು ಅದರ ಮೇಲೆ ಬೆಳೆದ ಗಿಡ ಗಂಟಿಗಳನ್ನು ಕಡಿಯದಂತೆ ಹಾಗೂ ವಾದಿಯ ಜಮೀನದ ಪೂರ್ವ ಬಾಂದಿಗೆ ಇರುವ ಹಾತ ನಕಾಶೆಯಲ್ಲಿ ತೋರಿಸಿದ "ಓ.ಪಿ" ಒಡ್ಡನ್ನು 2 ನೇ ಪ್ರತಿವಾದಿಯು ಕಡಿಯದಂತೆ ಅದರ ಮೇಲೆ ಬೆಳೆದ ಗಿಡ ಗಂಟೆಗಳನ್ನು ನಾಶ ಮಾಡದಂತೆ ಪ್ರತಿವಾದಿಯರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ.

**1** ನೇ ಪ್ರತಿವಾದಿಯು ಈ ದಾವೆಯಲ್ಲಿ ವಾದಿಯು ಅತಿಕ್ರಮ ಮಾಡಿರುವ ಒಂದು ಎಕರೆ ಜಮೀನಿನ ಸ್ವಾಧೀನತೆಗೆ ಹಾಗೂ ಶಾಶ್ವತ ನಿರ್ಭಂದಕಾಜ್ಞೆಯ ಪರಿಹಾರವನ್ನು ತಮ್ಮ ಎದುರು ಕ್ಲೇಮಿನಲ್ಲಿ ಕೋರಿರುತ್ತಾರೆ.

**2. ವಾದಿಯರ ವಾದಪತ್ರದಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆ:-**

ವಾದಿಯು ಹುಣಶ್ಯಾಳ ಪಿ.ಬಿ ಗ್ರಾಮದ ಕ . ಸ ನಂ: **51/2** ವಿಸ್ತೀರ್ಣ **03** ಎಕರೆ ಜಮೀನಿನ ಸ್ವಾಧೀನಾನುಭವದಲ್ಲಿ ಇರುತ್ತಾರೆ. ಅದೇ ರೀತಿಯಾಗಿ **1** ನೇ ಪ್ರತಿವಾದಿಯು ಸದರಿ ಗ್ರಾಮದ ಕ . ಸ . ನಂ: **51/1** ಬ ವಿಸ್ತೀರ್ಣ **03** ಎಕರೆ **03** ಗುಂಟೆ ಮತ್ತು **2** ನೇ ಪ್ರತಿವಾದಿಯು ಸದರಿ ಗ್ರಾಮದ ಕ. ಸ ನಂ: **51/3** ವಿಸ್ತೀರ್ಣ **03** ಎಕರೆ ಜಮೀನಿನ ಸ್ವಾಧೀನಾನುಭವದಲ್ಲಿರುತ್ತಾರೆ. ಈ ಕುರಿತು ವಾದಿಯು ವಾದ ಪತ್ರದೊಂದಿಗೆ ಹಾತ ನಕಾಶೆಯನ್ನು ಹಾಜರುಪಡಿಸಿದ್ದು ಸದರಿ ಹಾತ ನಕಾಶನೆಯನ್ನು ವಾದ ಪತ್ರದ ಭಾಗವೆಂದು ಪರಿಗಣಿಸಬೇಕೆಂದು ಕೋರಿರುತ್ತಾರೆ. ವಾದಿಯು ಸ್ವಾಧೀನಾನುಭವದಲ್ಲಿರುವ ಕ.ಸ ನಂ: **51/2** ಸದರಿ ಜಮೀನನ್ನು ಹಾತ ನಕಾಶೆಯಲ್ಲಿ ಎಮ್ . ಎನ್ ಓ . ಪಿ ಎಂದು ತೋರಿಸಲಾಗಿರುತ್ತದೆ. **2** ನೇ ಪ್ರತಿವಾದಿಯ ಮಾಲ್ಕೀ ಜಮೀನದ ಕ ಸ ನಂ: **51/3** ಜಮೀನನ್ನು "ಓ . ಪಿ .ಕ್ಯೂ.ಆರ್ " ಅಂತ ಹಾತ ನಕಾಶೆಯಲ್ಲಿ ಕಾಣಿಸಲಾಗಿದೆ . **1** ನೇ ಪ್ರತಿವಾದಿ ಕಬ್ಜಾ ವಹಿವಾಟಿಯಲ್ಲಿ ಇರುವ ಕಸನಂ: **51/1** ಬ ಸದರ ಜಮೀನವನ್ನು ' ಎಮ್.ಎನ್.ಎಸ್.ಟಿ' ಎಂದು ಹಾತ ನಕಾಶೆಯಲ್ಲಿ ನಮೂದ ಮಾಡಿಲಾಗಿದೆ. **1** ನೇ ಪ್ರತಿವಾದಿಯು ವಾದಿಯ ಜಮೀನದ ಪಶ್ಚಿಮ ಬಾಂದಿಗೆ 'ಎಮ್.ಎನ್' ಅಂತಾ ಹಾತ ನಕಾಶೆಯಲ್ಲಿ ತೋರಿಸಿದ ಒಡ್ಡನ್ನು ಕಡಿಯುವುದು ಅದರ ಮೇಲೆ ಬೆಳೆದ ಗಿಡ ಗಂಟೆಗಳನ್ನು ನಾಶ ಮಾಡುವದು ಹಾಗೂ ವಾದಿಯ ಜಮೀನದಲ್ಲಿ ಪೈಪಲೈನ ಹಾಳು ಮಾಡುವುದು ಮಾಡಹತ್ತಿರುತ್ತಾನೆ. **2** ನೇ ಪ್ರತಿವಾದಿಯು ವಾದಿಯ ಜಮೀನ ಪೂರ್ವಕ್ಕೆ ಇರುವ ,"ಓ . ಪಿ " ಒಡ್ಡನ್ನು ಕಡಿಯುವುದು ಮತ್ತು ಅದರ ಮೇಲೆ ಬೆಳೆದ ಗಿಡಗಂಟೆಗಳನ್ನು ನಾಶ ಮಾಡುವುದು ಮಾಡ ಹತ್ತಿರುತ್ತಾನೆ. ವಾದಿಯು ಪ್ರತಿವಾದಿಯರಿಗೆ ಒಡ್ಡು ಕಡಿದು ಅತಿಕ್ರಮಣ ಮಾಡಬೇಡಿರಿ ಗಿಡ ಗಂಟೆಗಳನ್ನು ಕಡಿಯಬೇಡಿರಿ ಎಂದು ಹೇಳಿದರು ಸಹ ಪ್ರತಿವಾದಿಯರು ವಾದಿಯ ಮಾತಿಗೆ ಬೆಲೆ ಕೊಡಲಿಲ್ಲ ಆಗ ವಾದಿಯು ಗ್ರಾಮದ ಹಿರಿಯರಿಂದ ಒಡ್ಡು ಹಾಗೂ ಗಿಡ ಗಂಟಿ ಕಡಿಯದಂತೆ ಹಾಗೂ ವಾದಿಯ ಜಮೀನದಲ್ಲಿ ಅತಿಕ್ರಮಣ ಮಾಡಬಾರದು ಅಂತಾ ಹೇಳಿಸಿದರೂ ಪ್ರತಿವಾದಿಯರು ಹಿರಿಯರ ಮಾತಿಗೆ ಬೆಲೆ ಕೊಡಲಿಲ್ಲ. ಹಾಗಾಗಿ ವಾದಿಯು ತನ್ನ ಜಮೀನದ ಪೂರ್ವಕ್ಕೆ ಇರುವ "ಓ . ಪಿ " ಒಡ್ಡನ್ನು ಹಾಗೂ ಪಶ್ಚಿಮಕ್ಕೆ ಇರುವ 'ಎಮ್.ಎನ್' ಒಡ್ಡನ್ನು ಹಾಗೂ ಅವುಗಳ ಮೇಲೆ ಬೆಳೆದ ಗಿಡ ಗಂಟಿಗಳನ್ನು ಕಡಿದು ಪ್ರತಿವಾದಿಯರು ನಾಶ ಮಾಡದಂತೆ ಪ್ರತಿವಾದಿಯರ ವಿರುದ್ದ ಶಾಶ್ವತ

ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಹಾಗಾಗಿ ವಾದಿಯು ಸಲ್ಲಿಸಿರುವ ದಾವೆಯನ್ನು ಡಿಕ್ರಿ ಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

**3.** ವಾದಿಯರು ದಾವೆಯನ್ನು ಸಲ್ಲಿಸಿದ ನಂತರ ನ್ಯಾಯಾಲಯವು ಪ್ರತಿವಾದಿಗಳಿಗೆ ಸಮನ್ಸನ್ನು ಜಾರಿಗೊಳಿಸಿದ್ದು ಪ್ರತಿವಾದಿಯರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದು **1** ನೇ ಪ್ರತಿವಾದಿಯು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. **2** ನೇ ಪ್ರತಿವಾದಿಯು ವಕೀಲರ ಮೂಲಕ ಹಾಜರಾಗಿದಾಗ್ಯೂ ಸಹ ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. **1** ನೇ ಪ್ರತಿವಾದಿಯು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆ:

➢ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಯು ವಾದ ಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ವಾದಿಯು ಹುಣಶ್ಯಾಳ ಪಿಬಿ ಗ್ರಾಮದ ಕ.ಸ ನಂ: **51/2, 1** ನೇ ಪ್ರತಿವಾದಿಯು ಸದರಿ ಗ್ರಾಮದ ಕ.ಸ ನಂ: **51/1** ಬ ಮತ್ತು **2** ನೇ ಪ್ರತಿವಾದಿಯು ಸದರಿ ಗ್ರಾಮದ ಕ.ಸ ನಂ: **51/3** ರ ಆಸ್ತಿಗಳಿಗೆ ಮಾಲೀಕತ್ವವನ್ನು ಹೊಂದಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ವಾದಿಯು ತನ್ನ ಹಾತ ನಕಾಶೆಯಲ್ಲಿ ಎಮ್ . ಎನ್ ಅಂತ ಗುರುತಿಸಿದ ಜಾಗೆಯಲ್ಲಿ **1** ನೇ ಪ್ರತಿವಾದಿಯ ಜಮೀನದಲ್ಲಿಯ ಸುಮಾರು **01** ಎಕರೆ ಕ್ಷೇತ್ರವನ್ನು ವಾದಿಯು ಒತ್ತುವರಿ ಮಾಡಿದ್ದು ಇರುತ್ತದೆ. ವಾದಿಯು ಅತಿಕ್ರಮಣ ಮಾಡಿದ ಸುಮಾರು **01** ಎಕರೆ ಜಮೀನನ್ನು ಪ್ರತಿವಾದಿಯ ಕಬ್ಜಾಕ್ಕೆ ಕೊಡಿಸಬೇಕು ಹಾಗೂ ವಾದಿಯು ತನ್ನ ಜಮೀನದ ಪಶ್ಚಿಮ ಬಾಂದಿನಲ್ಲಿ ಅಂದರೆ ಎಮ್ . ಎನ್ ಬಾಂದಿನಲ್ಲಿ ಯಾವುದೇ ಗಿಡ ಗಂಟೆಗಳನ್ನು ಬೆಳೆಸಬಾರದು ಅಂತಾ ವಾದಿಯ ವಿರುದ್ಧ ಶಾಶ್ವತ ನಿರ್ಭಂದಕಾಜ್ಞೆಯ ಪರಿಹಾರವನ್ನು ಕೇಳಿ ಪ್ರತಿಮಾಗಣಿಯನ್ನು ಸಲ್ಲಿಸಿದ್ದು ಇರುತ್ತದೆ. ಹಾಗಾಗಿ ವಾದಿಯು ಸಲ್ಲಿಸಿರುವ ದಾವೆಯನ್ನು ವಜಾಗೊಳಿಸಿ **1** ನೇ ಪ್ರತಿವಾದಿಯ ಪ್ರತಿ ಮಾಗಣಿಯನ್ನು **(counter claim)** ಪುರಸ್ಕರಿಸಬೇಕೆಂದು ಪಾರ್ಥಿಸಿಕೊಂಡಿರುತ್ತಾರೆ.

**4.** ವಾದಿಯು **1** ನೇ ಪ್ರತಿವಾದಿಯು ಸಲ್ಲಿಸಿದ ಪ್ರತಿಮಾಗಣಿಗೆ ಯಾವುದೇ ಪ್ರತ್ಯುತ್ತರವನ್ನು **(Rejoinder)** ಸಲ್ಲಿಸಿರುವುದಿಲ್ಲ

5. ಮೇಲ್ಕಾಣಿಸಿದ ಉಭಯ ಪಕ್ಷಗಾರರ ವಾದ ಪ್ರತಿವಾದ ಪತ್ರಗಳಲ್ಲಿನ ಸಂಗತಿಗಳನ್ನು ಆಧರಿಸಿ ನ್ಯಾಯಾಧೀಶರು ಈ ಕೆಳಗಿನಂತೆ ವಿವಾದಾಂಶಗಳನ್ನು ರೂಪಿಸಿರುತ್ತಾರೆ.

ವಿವಾದಾಂಶಗಳು

1. Whether the plaintiff proves the existence of suit “MN” and “OP” bunds towards western and eastern side of CB No. 51/2 as per his plaint hand sketch?
2. Whether the plaintiff proves that, suit “MN” and “OP” bunds are part and parcel of CB No.51/2?
3. Whether the plaintiff proves that, he is in possession and enjoyment of CB No.51/2 of Hunashyal PB village?
4. Whether the plaintiff proves the alleged interference by the defendants?
5. Whether defendant No.1 proves that, he is in possession and enjoyment of “CB” No.51/1B?
6. Whether the defendant No.1 proves the alleged encroachment of 01 acre land by the plaintiff?
7. Whether plaintiff is entitled to the relief of permanent injunction as sought for?
8. Whether the defendant No.1 is entitled to the relief of counter claim as sought for?
9. What order or decree?

6. ಮೇಲ್ಕಾಣಿಸಿದ ವಿವಾದಾಂಶಗಳನ್ನು ರುಜುವಾತುಪಡಿಸುವ ಸಲುವಾಗಿ ವಾದಿಯು ತನ್ನನ್ನು ತಾನು ಪಿ.ಡಬ್ಲ್ಯೂ.1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಭೀಮನಗೌಡ ತಂದೆ ಲಕ್ಷ್ಮಣ ಆಲೂರ ಎಂಬುವವನ್ನು ಪಿಡಬ್ಲ್ಯೂ-2 ಎಂದು ಸಾಕ್ಷ್ಯ

ಮಾಡಿಸಿರುತ್ತಾರೆ. ವಾದಿಯು ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ.1 ರಿಂದ ನಿಪಿ. 7 ರ ದಾಖಲಾತಿಗಳನ್ನು ನಿಶಾನಿಸಿರುತ್ತಾರೆ. ಇದಕ್ಕೆ ಪ್ರತಿಯಾಗಿ **1** ನೇ ಪ್ರತಿವಾದಿಯು ತನ್ನನ್ನು ತಾನು ಡಿ.ಡಬ್ಲ್ಯೂ.1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಸದರಿ 1 ನೇ ಪ್ರತಿವಾದಿಯು ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಶಾನೆ ಡಿ.1 ರಿಂದ ನಿಶಾನೆ ಡಿ.7 ರ ದಾಖಲಾತಿಗಳನ್ನು ನಿಶಾನಿಸಿರುತ್ತಾರೆ.

7. 1 ನೇ ಪ್ರತಿವಾದಿ ವಕೀಲರ ವಾದವನ್ನು ಆಲಿಸಲಾಯಿತು. ವಾದಿ ಹಾಗೂ **2** ನೇ ಪ್ರತಿವಾದಿ ಪರ ವಕೀಲರಿಗೆ ವಾದ ಮಂಡನೆಗೆ ಸಾಕಷ್ಟು ಕಾಲಾವಕಾಶ ನೀಡದರೂ ಸಹ ತಮ್ಮ ವಾದ ಮಂಡನೆ ಮಾಡದೇ ಇರುವುದರಿಂದ ವಾದಿ ಹಾಗೂ **2** ನೇ ಪ್ರತಿವಾದಿ ಪರ ವಕೀಲರ ವಾದ ಮಂಡನೆ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

8. ಮೇಲ್ಕಾಣಿಸಿದ ವಿವಾದಾಂಶಗಳಿಗೆ ಈ ನ್ಯಾಯಾಲಯದ ಉತ್ತರ ಈ ಕೆಳಗಿನಂತಿರುತ್ತದೆ:-

ವಿವಾದಾಂಶ ಸಂಖ್ಯೆ 1- ನಕಾರಾತ್ಮಕವಾಗಿ
ವಿವಾದಾಂಶ ಸಂಖ್ಯೆ 2 - ನಕಾರಾತ್ಮಕವಾಗಿ
ವಿವಾದಾಂಶ ಸಂಖ್ಯೆ 3 - ನಕಾರಾತ್ಮಕವಾಗಿ
ವಿವಾದಾಂಶ ಸಂಖ್ಯೆ 4- ನಕಾರಾತ್ಮಕವಾಗಿ
ವಿವಾದಾಂಶ ಸಂಖ್ಯೆ 5 - ನಕಾರಾತ್ಮಕವಾಗಿ
ವಿವಾದಾಂಶ ಸಂಖ್ಯೆ 6 - ನಕಾರಾತ್ಮಕವಾಗಿ
ವಿವಾದಾಂಶ ಸಂಖ್ಯೆ 7 - ನಕಾರಾತ್ಮಕವಾಗಿ
ವಿವಾದಾಂಶ ಸಂಖ್ಯೆ 8 - ನಕಾರಾತ್ಮಕವಾಗಿ
ವಿವಾದಾಂಶ ಸಂಖ್ಯೆ 9 ಃ- ಅಂತಿಮ ಆದೇಶದಂತೆ:

ಕಾ ರ ಣ ಗ ಳು

**9.** ವಿವಾದಾಂಶ **1** ರಿಂದ **3 , 5** ಮತ್ತು **6 -** ಈ ಎಲ್ಲಾ ವಿವಾದಾಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದಲೂ ಮತ್ತು ಇವುಗಳಿಗೆ ನೀಡುವ ಕಾರಣಗಳು ಒಂದೇ ಆಗಿರುವುದರಿಂದಲೂ ಈ ಎಲ್ಲಾ ವಿವಾದಾಂಶಗಳನ್ನು ಒಟ್ಟಿಗೆ ಚರ್ಚಿಸಲಾಗಿರುತ್ತದೆ.

10. ವಾದಿಯು ತಮ್ಮ ವಾದಪತ್ರದಲ್ಲಿ ದಾವಾ ಅನುಸೂಚಿತ ಸ್ವತ್ತಿನಲ್ಲಿ ತಾನು ಸ್ವಾಧೀನಾನುಭವದಲ್ಲಿ ಇರುತ್ತನೆ. ತಮ್ಮ ಆಸ್ತಿಯ ಸರ್ವೆ ನಂ: 51/2 ರ ಆಸ್ತಿಯ

ಪೂರ್ವ ಮತ್ತು ಪಶ್ಚಿಮಕ್ಕೆ ಹಾತ ನಕಾಶೆಯಲ್ಲಿ ತೋರಿಸಿದಂತೆ ಎಮ್.ಎನ್ ಮತ್ತು ಓ.ಪಿ ಒಡ್ಡುಗಳು ಅಸ್ತಿತ್ವದಲ್ಲಿರುತ್ತವೆ ಹಾಗೂ ಸದರಿ ಎಮ್.ಎನ್ ಮತ್ತು ಓ.ಪಿ ಒಡ್ಡುಗಳು ತನ್ನ ಆಸ್ತಿ ಸರ್ವೆ ನಂ: 51/2 ರ ಆಸ್ತಿಯ ಭಾಗಗಳಾಗಿರುತ್ತವೆ ಎಂದು ಹೇಳಿರುತ್ತಾರೆ. ಹಾಗಾಗಿ ವಾದಿಯು ದಾವಾ ಅನುಸೂಚಿತ ಸ್ವತ್ತಿನ ಕುರಿತು ಮಾಲೀಕತ್ವದ ಹಕ್ಕನ್ನು ಮತ್ತು ಸ್ವಾಧೀನತೆಯನ್ನು ಅರ್ಜಿಸಿರುವುದು ಕಂಡು ಬರುತ್ತದೆ. ಇದಕ್ಕೆ ಪ್ರತಿಯಾಗಿ 1 ನೇ ಪ್ರತಿವಾದಿಯು ವಾದಿಯ ದಾವಾ ಅನೂಸೂಚಿ ಸ್ವತ್ತಿನ ಮಾಲೀಕತ್ವವನ್ನು ಮತ್ತು ಸ್ವಾಧೀನತೆಯನ್ನು ಒಪ್ಪಿಕೊಂಡು, 1 ನೇ ಪ್ರತಿವಾದಿಯು ಕ.ಸ ನಂ: 51/1 ಬ ಆಸ್ತಿಯ ಮಾಲೀಕತ್ವವನ್ನು ಹೊಂದಿ ಸದರಿ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಮತ್ತು ವಾದಿಯು 1 ನೇ ಪ್ರತಿವಾದಿಯ ಆಸ್ತಿಯಲ್ಲಿ 1 ಎಕರೆ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಎಂದು ಹೇಳಿರುವುದು ಕಂಡು ಬರುತ್ತದೆ.

11. ವಾದಿಯು ತಮ್ಮ ವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ರುಜುವಾತುಪಡಿಸಲು ವಾದಿಯು ತನ್ನನ್ನು ತಾನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ಮಾಡಿಸಿದ್ದು, ಸದರಿ ಪಿ.ಡಬ್ಲ್ಯೂ-1 ರವರು ತಮ್ಮ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ತಮ್ಮ ಪ್ರಮಾಣ ಪತ್ರದಲ್ಲಿ ವಾದಪತ್ರದಲ್ಲಿನ ಅಂಶಗಳನ್ನೇ ಪುನರುಚ್ಚರಿಸಿರುತ್ತಾರೆ. ವಾದಿಯು ತಮ್ಮ ಸಾಕ್ಷ್ಯಕ್ಕೆ ಪೂರಕವಾಗಿ ಭೀಮನಗೌಡ ತಂದೆ ಲಕ್ಷ್ಮಣ ಆಲೂರ ಎಂಬುವರನ್ನು ಪಿ.ಡಬ್ಲ್ಯೂ-2 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ವಾದಿಯರು ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿ.ಪಿ-**1** ರಿಂದ **7** ರಂತೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ.

12. ವಾದಿಯು ನಿಶಾನೆ ಪಿ-1 ರಿಂದ 3 ರಂತೆ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಸದರಿ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಿದಾಗ ಹುಣಶ್ಯಾಳ ಪಿಬಿ ಗ್ರಾಮದ ಸರ್ವೆ ನಂ: 51/2 ವಿಸ್ತೀರ್ಣ 03 ಎಕರೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂ ನಲ್ಲಿ ನಿಂಗಪ್ಪ ಲಕ್ಷ್ಮಣ ಆಲೂರ ರವರ ಹೆಸರು ನಮೂದಾಗಿರುವುದು ಕಂಡು ಬರುತ್ತದೆ. ನಿಶಾನೆ ಪಿ-2 ರ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಹುಣಶ್ಯಾಳ ಪಿಬಿ ಗ್ರಾಮದ ಸರ್ವೆ ನಂ: 51/1 ಬ ವಿಸ್ತೀರ್ಣ 03 ಎಕರೆ 03 ಗುಂಟೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂ ನಲ್ಲಿ ರಮೇಶ

ನಿಂಗೊಂಡಪ್ಪ ಮುಳವಾಡರವರ ಹೆಸರು ನಮೂದಾಗಿರುವುದು ಕಂಡು ಬರುತ್ತದೆ. ನಿಪಿ-3 ರ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಹುಣಶ್ಯಾಳ ಪಿ.ಬಿ ಗ್ರಾಮದ ಸರ್ವೆ ನಂ: 51/3 ವಿಸ್ತೀರ್ಣ 03 ಎಕರೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂ ನಲ್ಲಿ ಶ್ರೀಧರ ಭೀಮನಗೌಡ ಆಲೂರರವರ ಹೆಸರು ನಮೂದಾಗಿರುವುದು ಕಂಡು ಬರುತ್ತದೆ. ನಿಪಿ-4 ರಿಂದ 7 ರಂತೆ ಮೂರು ಛಾಯಾ ಚಿತ್ರಗಳನ್ನು ಮತ್ತು ಒಂದು ಸಿಡಿಯನ್ನು ಹಾಜರುಪಡಿಸಿದ್ದು, ಸದರಿ ಛಾಯಾ ಚಿತ್ರಗಳನ್ನು ಪರಿಶೀಲಿಸಿದಾಗ, ಸದರಿ ಛಾಯಾ ಚಿತ್ರಗಳಲ್ಲಿ ಜಮೀನು ಮತ್ತು ಜಮೀನಿನಲ್ಲಿ ಒಡ್ಡು ಇರುವುದು ಹಾಗೂ ಸದರಿ ಒಡ್ಡಿನಲ್ಲಿ ಗಿಡಗಳು ಬೆಳೆದಿರುವುದು ಕಂಡು ಬರುತ್ತದೆ.

13. 1 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ರುಜುವಾತುಪಡಿಸಲು 1 ನೇ ಪ್ರತಿವಾದಿಯು ತನ್ನನ್ನು ತಾನು ಡಿ.ಡಬ್ಲ್ಯೂ-1 ಎಂದು ಸಾಕ್ಷ್ಯ ಮಾಡಿಸಿದ್ದು, ಸದರಿ ಡಿ.ಡಬ್ಲ್ಯೂ-1 ರವರು ತಮ್ಮ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ ಪ್ರತಿವಾದ ಪತ್ರದಲ್ಲಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ. 1 ನೇ ಪ್ರತಿವಾದಿಯು ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಡಿ-1 ರಿಂದ 7 ರಂತೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ.

14. ನಿಶಾನೆ ಡಿ-1 ರಂತೆ ಒಂದು ಪಿಟಿ ಶೀಟನ್ನು ಹಾಜರುಪಡಿಸಿದ್ದು, ಸದರಿ ಪಿಟಿ ಶೀಟನ್ನು ಪರಿಶೀಲಿಸಿದಾಗ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ದಿ: 28-07-2001 ರಂದು ಸರ್ವೆ ನಂ: 51/1 , 51/2, 51/3 ಮತ್ತು 51/4 ರ ಜಮೀನುಗಳನ್ನು ಅಳತೆ ಮಾಡಿರುವುದು ಮತ್ತು ಸದರಿ ಹದ್ದು ಬಸ್ತು ನಕ್ಷೆಯಲ್ಲಿ ಶರಾ (1) ಹದ್ದು ಬಸ್ತು ಅಳತೆಗಳನ್ನು ಭೂದಾಖಲೆಗಳ ಸಹಾಯಕ ನಿರ್ದೇಶಕರವರ ಆದೇಶದ ಸಂಖ್ಯೆ BNN/ HBC-88+89+90 ರ ಪ್ರಕಾರ ಅಳತೆ ಮಾಡಿದೆ. (2) ಸರ್ವೆ ನಂಬರು, ಹಿಸ್ಸಾ ಹದ್ದು ಬಸ್ತನ್ನು ಮೂಲ ಹಿಸ್ಸಾ ಟಿಪ್ಪಣಿಯಲ್ಲಿನ ಅಳತೆಯಂತೆ ಗುರುತಿಸಿದೆ. ಅರ್ಜಿದಾರನ ಪ್ರದೇಶವನ್ನು ಬಾಜು ಸರ್ವೆ ನಂಬರಿನ ಹಿಡುವಳಿದಾರರು ಒತ್ತುವರಿ ಮಾಡಿರುತ್ತಾರೆ. ಅರ್ಜಿದಾರನ ಕ.ಸ.ನಂ:51/1 ರಲ್ಲಿ ಕ.ಸ,ನಂ 51/2 ರ ಮಾಲೀಕರು ಅತಿಕ್ರಮಣ ಮಾಡಿದ ಕ್ಷೇತ್ರ 01 ಎಕರೆ ಇರುತ್ತದೆ. ಅರ್ಜಿದಾರನ ಕ.ಸ.ನಂ:51/2 ರಲ್ಲಿ ಕ.ಸ.ನಂ 51/3 ರ ಮಾಲೀಕರು ಅತಿಕ್ರಮಣ ಮಾಡಿದ ಕ್ಷೇತ್ರ 01 ಎಕರೆ 20 ಗುಂಟೆ ಇರುತ್ತದೆ ಹಾಗೂ

ಅರ್ಜಿದಾರನ ಕ.ಸ ನಂ:51/3 ರಲ್ಲಿ ಕ.ಸ ನಂ 51/4 ರ ಮಾಲೀಕರು ಅತಿಕ್ರಮಣ ಮಾಡಿದ ಕ್ಷೇತ್ರ 02 ಎಕರೆ ಇರುತ್ತದೆ ಎಂದು ನಮೂದಿಸಿರುವುದು ಕಂಡು ಬರುತ್ತದೆ.

15. ನಿ.ಡಿ-2 ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಹುಣಶ್ಯಾಳ ಪಿಬಿ ಗ್ರಾಮದ ಸರ್ವೆ ನಂ: 51/1 ಅ ವಿಸ್ತೀರ್ಣ 03 ಎಕರೆ 03 ಗುಂಟೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂ ನಲ್ಲಿ ದೀಲಿಪಕುಮಾರ ತಂದೆ ನಿಂಗೊಂಡಪ್ಪ ಮುಳವಾಡರವರ ಹೆಸರು ನಮೂದಾಗಿರುವುದು ಕಂಡು ಬರುತ್ತದೆ. ನಿ.ಡಿ-3 ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಹುಣಶ್ಯಾಳ ಪಿಬಿ ಗ್ರಾಮದ ಸರ್ವೆ ನಂ: 51/1 ಬ ವಿಸ್ತೀರ್ಣ 03 ಎಕರೆ 03 ಗುಂಟೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂ ನಲ್ಲಿ ರಮೇಶ ನಿಂಗೊಂಡಪ್ಪ ಮುಳವಾಡರವರ ಹೆಸರು ನಮೂದಾಗಿರುವುದು ಕಂಡು ಬರುತ್ತದೆ. ನಿ.ಡಿ-4 ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಹುಣಶ್ಯಾಳ ಪಿಬಿ ಗ್ರಾಮದ ಸರ್ವೆ ನಂ: 51/2 ವಿಸ್ತೀರ್ಣ 03 ಎಕರೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂ ನಲ್ಲಿ ನಿಂಗಪ್ಪ ತಂದೆ ಲಕ್ಷ್ಮಣ ಆಲೂರರವರ ಹೆಸರು ನಮೂದಾಗಿರುವುದು ಕಂಡು ಬರುತ್ತದೆ. ನಿ.ಡಿ-5 ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಹುಣಶ್ಯಾಳ ಪಿಬಿ ಗ್ರಾಮದ ಸರ್ವೆ ನಂ: 51/3 ವಿಸ್ತೀರ್ಣ 03 ಎಕರೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂನಲ್ಲಿ ಶ್ರೀಧರ ತಂದೆ ಭೀಮನಗೌಡ ಆಲೂರರವರ ಹೆಸರು ನಮೂದಾಗಿರುವುದು ಕಂಡು ಬರುತ್ತದೆ. ನಿ.ಡಿ-6 ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಹುಣಶ್ಯಾಳ ಪಿಬಿ ಗ್ರಾಮದ ಸರ್ವೆ ನಂ: 51/4 ಬ ವಿಸ್ತೀರ್ಣ 06 ಎಕರೆ 20 ಗುಂಟೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂ ನಲ್ಲಿ ಲಕ್ಷ್ಮೀ ಬಸಪ್ಪ ಮೇಟಿ ಹಾಗೂ ಇತರರ ಹೆಸರು ನಮೂದಾಗಿರುವುದು ಕಂಡು ಬರುತ್ತದೆ. ನಿ.ಡಿ-7 ಮ್ಯುಟೇಶನ ರಜಿಸ್ಟರ ಪ್ರತಿಯನ್ನು ಹಾಜರು ಪಡಿಸಿದ್ದು ಸದರಿ ಮ್ಯುಟೇಶನ ರಜಿಸ್ಟರ ಪ್ರತಿಯನ್ನುಪರಿಶೀಲಿಸಿದಾಗ ಹುಣಶ್ಯಾಳ ಪಿಬಿ ಗ್ರಾಮದ ಸರ್ವೆ ನಂ: 51/*/1 ವಿಸ್ತೀರ್ಣ 06 ಎಕರೆ 06 ಗುಂಟೆ ಜಮೀನಿನ ಹಕ್ಕು ಬದಲಾವಣೆಯಾಗಿ ದೀಲಿಪಕುಮಾರ ನಿಂಗೊಂಡಪ್ಪ ಮುಳವಾಡ ಹಾಗೂ ರಮೇಶ ನಿಂಗೊಂಡಪ್ಪ ಮುಳವಾಡರವರ ಹೆಸರಿನಲ್ಲಿ ನಮೂದಾಗಿರುವುದು ಕಂಡು ಬರುತ್ತದೆ.

**16.** ಈ ಮೇಲ್ಕಂಡ ಉಭಯ ಪಕ್ಷಗಾರರ ಪರ ಹೇಳಿಕೆಗಳನ್ನು, ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ವಾದಿಯು ದಾವಾ ಆಸ್ತಿ ಸರ್ವೆ ನಂ: 51/2 ಕ್ಷೇತ್ರ 03 ಎಕರೆ ಆಸ್ತಿಗೆ ಮಾಲೀಕತ್ವವನ್ನು ಹೊಂದಿ ಸದರಿ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇರುವುದಾಗಿ ವಾದಪತ್ರದಲ್ಲಿ ನಮೂದಿಸಿರುವುದು ಕಂಡು ಬರುತ್ತದೆ. ಅದೇ ರೀತಿಯಾಗಿ 1 ನೇ ಪ್ರತಿವಾದಿಯು ಕ .ಸ. ನಃ 51/1 ಬ ಕ್ಷೇತ್ರ 03 ಎಕರೆ 03 ಗುಂಟೆ ಆಸ್ತಿಗೆ ಮತ್ತು 2 ನೇ ಪ್ರತಿವಾದಿಯು ಕ. ಸ. ನಂ: 51/3 ಕ್ಷೇತ್ರ 03 ಎಕರೆ ಜಮೀನಿಗೆ ಮಾಲೀಕರಾಗಿ ಸ್ವಾಧೀನಾನುಭವದಲ್ಲಿರುವುದಾಗಿ ತಮ್ಮ ಪ್ರತಿವಾದ ಪತ್ರದಲ್ಲಿ ನಮೂದಿಸಿರುವುದು ಕಂಡು ಬರುತ್ತದೆ. ಉಭಯ ಪಕ್ಷಗಾರರಲ್ಲಿ ವಾದಿಯು ವಾದ ಪತ್ರದಲ್ಲಿ ಹೇಳಿರುವ ದಾವಾ ಆಸ್ತಿಗೆ 1 ನೇ ಪ್ರತಿವಾದಿಯು ಮಾಲೀಕತ್ವವನ್ನು ಹೊಂದಿರುವ ಕುರಿತು ಮತ್ತು 1 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ಹೇಳಿರುವ ಆಸ್ತಿಗೆ ಮಾಲೀಕತ್ವ ಹೊಂದಿರುವ ಕುರಿತು ಉಭಯ ಪಕ್ಷಗಾರರಲ್ಲಿ ಯಾವುದೇ ರೀತಿಯ ವಿವಾದ ಇರುವುದು ಕಂಡು ಬರುವುದಿಲ್ಲ. ಹಾಗಾಗಿ ವಾದಿಯು ವಾದ ಪತ್ರದಲ್ಲಿ ಹೇಳಿರುವ ದಾವಾ ಆಸ್ತಿ ಸರ್ವೆ ನಂ: 51/2 ರ ಆಸ್ತಿಗೆ ಮತ್ತು 1 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ಹೇಳಿರುವ ಆಸ್ತಿ ಸರ್ವೆ ನಂ: 51/1 ಬ ಕ್ಷೇತ್ರ 03 ಎಕರೆ 03 ಗುಂಟೆ ಆಸ್ತಿಗೆ ಮಾಲೀಕತ್ವವನ್ನು ಹೊಂದಿ ಸ್ವಾಧೀನಾನುಭವದಲ್ಲಿ ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

17. ವಾದಿ ಮತ್ತು 1 ನೇ ಪ್ರತಿವಾದಿಯು ಹಾಜರುಪಡಿಸಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ವಾದಿಯು ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ವಾದಿಯು ದಾವಾ ಆಸ್ತಿ ಸರ್ವೆ ನಂ: 51/2 ರ ಆಸ್ತಿಯಲ್ಲಿ ಸ್ವಾಧೀನುನಾಭವದಲ್ಲಿ ಇರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. 1 ನೇ ಪ್ರತಿವಾದಿಯು ಸಹ ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಯು ದಾವಾ ಆಸ್ತಿ ಸರ್ವೆ ನಂ: 51/2 ರ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿರುವ ಕುರಿತು ಒಪ್ಪಿಕೊಂಡಿರುತ್ತಾರೆ. ಈ ಕುರಿತು ವಾದಿಯು ಹಾಜರು ಪಡಿಸಿರುವ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಿದಾಗ ದಾವಾ ಆಸ್ತಿಯ ಖಾತೆಯು ವಾದಿಯ ಹೆಸರಿನಲ್ಲಿ ಇರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಹಾಗಾಗಿ ವಾದಿಯು ದಾವಾ ಅನುಸೂಚಿ ಆಸ್ತಿ ಸರ್ವೆ ನಂ: 51/2 ರ ಸ್ವತ್ತಿನಲ್ಲಿ ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ತಾನು ಸ್ವಾಧೀನಾನುಭವದಲ್ಲಿ ಇರುತ್ತೇನೆ ಎಂಬುದನ್ನು

ವಾದಿಯು ಪ್ರಭಲವಾದ ಹಾಗೂ ನ್ಯಾಯಾಲಯವು ನಂಬಬಹುದಾದ ಸಾಕ್ಷ್ಯಾದಾರಗಳ ಮೂಲಕ ರುಜುವಾತು ಪಡಿಸಿರುತ್ತಾರೆ.

**18.** ವಾದಿಯು ತಮ್ಮ ವಾದ ಪತ್ರದಲ್ಲಿ ಸರ್ವೆ ನಂ: **51/2** ರ ಆಸ್ತಿಯ ಪೂರ್ವಕ್ಕೆ ಓ.ಪಿ ಮತ್ತು ಪಶ್ಚಿಮ ಎಮ್. ಎನ್ ಒಡ್ಡುಗಳು ಅಸ್ತಿತ್ವದಲ್ಲಿರುತ್ತವೆ ಮತ್ತು ಸದರಿ ಎಮ್.ಎನ್ ಮತ್ತು ಓ.ಪಿ ಒಡ್ಡುಗಳು ದಾವಾ ಆಸ್ತಿ ಸರ್ವೆ ನಂ: **51/2** ರ ಆಸ್ತಿಯ ಭಾಗಗಳಾಗಿರುತ್ತವೆ ಎಂದು ಉಲ್ಲೇಖಿಸಿರುತ್ತಾರೆ. ಇದಕ್ಕೆ ಪ್ರತಿಯಾಗಿ **1** ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ವಾದಿ ತಮ್ಮ ವಾದ ಪತ್ರದಲ್ಲಿ ಹೇಳಿರುವ ವಾದಿಯ ಜಮೀನದ ಪಶ್ಚಿಮಕ್ಕೆ ಎಮ್.ಎನ್ ಅಂತ ಒಡ್ಡು ಅಸ್ತಿತ್ವದಲ್ಲಿರುವುದನ್ನು ಅಲ್ಲಗಳೆದು ಸದರಿ ವಾದಿಯು ತನಗೆ ಸಂಬಂಧಿಸಿದ **1** ಎಕರೆ ಜಮೀನನ್ನು ಒತ್ತುವರಿ ಮಾಡಿರುತ್ತಾನೆ ಎಂದು ಹೇಳಿರುತ್ತಾರೆ.

19. ಇದಕ್ಕೆ ಪ್ರತಿಯಾಗಿ 1 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ವಾದಿ ತನ್ನ ಹಾತ ನಕಾಶೆಯಲ್ಲಿ ಎಮ್.ಎನ್ ಅಂತ ಗುರುತಿಸಿದ ಜಾಗೆಯಲ್ಲಿ ವಾದಿಯು 1 ನೇ ಪ್ರತಿವಾದಿಯ ಜಮೀನದಲ್ಲಿ ಸುಮಾರು 1 ಎಕರೆ ಕ್ಷೇತ್ರವನ್ನು ಒತ್ತುವರಿ ಮಾಡಿರುತ್ತಾನೆ ಎಂದು ಹೇಳಿರುವುದು ಕಂಡು ಬರುತ್ತದೆ.

20. ನಿಪಿ-1 ರ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಹುಣಶ್ಯಾಳ ಪಿಬಿ ಗ್ರಾಮದ ಸರ್ವೆ ನಂ: 51/2 ವಿಸ್ತೀರ್ಣ 03 ಎಕರೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂ ನಲ್ಲಿ ನಿಂಗಪ್ಪ ಲಕ್ಷ್ಮಣ ಆಲೂರ ರವರ ಹೆಸರು ನಮೂದಾಗಿರುವುದು ಕಂಡು ಬರುತ್ತದೆ. ನಿಶಾನೆ ಪಿ-2 ಸದರಿ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಹುಣಶ್ಯಾಳ ಪಿಬಿ ಗ್ರಾಮದ ಸರ್ವೆ ನಂ: 51/1 ಬ ವಿಸ್ತೀರ್ಣ 03 ಎಕರೆ 03 ಗುಂಟೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂ ನಲ್ಲಿ ರಮೇಶ ನಿಂಗೊಂಡಪ್ಪ ಮುಳವಾಡ ರವರ ಹೆಸರು ನಮೂದಾಗಿರುವುದು ಕಂಡು ಬರುತ್ತದೆ. ನಿಪಿ-3 ನ್ನು ಸದರಿ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಹುಣಶ್ಯಾಳ ಪಿ.ಬಿ ಗ್ರಾಮದ ಸರ್ವೆ ನಂ: 51/3 ವಿಸ್ತೀರ್ಣ 03 ಎಕರೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂ ನಲ್ಲಿ ಶ್ರೀಧರ ಭೀಮನಗೌಡ ಆಲೂರ ರವರ ಹೆಸರು ನಮೂದಾಗಿರುವುದು ಕಂಡು ಬರುತ್ತದೆ. ನಿಪಿ-4 ರಿಂದ 7 ರಂತೆ ಮೂರು ಛಾಯಾ ಚಿತ್ರಗಳನ್ನು ಮತ್ತು ಒಂದು ಸಿಡಿಯನ್ನು ಹಾಜರುಪಡಿಸಿದ್ದು, ಸದರಿ ಛಾಯಾ ಚಿತ್ರಗಳನ್ನು ಪರಿಶೀಲಿಸಿದಾಗ, ಸದರಿ

ಛಾಯಾ ಚಿತ್ರಗಳಲ್ಲಿ ಜಮೀನು, ಜಮೀನಿನಲ್ಲಿ ಒಡ್ಡು ಇರುವುದು ಹಾಗೂ ಸದರಿ ಒಡ್ಡಿನಲ್ಲಿ ಗಿಡಗಳು ಬೆಳೆದಿರುವುದು ಕಂಡು ಬರುತ್ತದೆ.

21. ಈ ಕುರಿತು ಪ್ರತಿವಾದಿಯು ನಿಶಾನೆ ಡಿ-1 ರಂತೆ ಒಂದು ಪಿಟಿ ಶೀಟನ್ನು ಹಾಜರುಪಡಿಸಿದ್ದು, ಸದರಿ ಪಿಟಿ ಶೀಟನ್ನು ಪರಿಶೀಲಿಸಿದಾಗ ಭೂ ದಾಖಲೆಗಳ ಸಹಾಯಕ ನಿರ್ದೇಶಕಕರು ದಿಃ 28-07-2001 ರಂದು ಸರ್ವೆ ನಂಃ 51/1 , 51/2, 51/3 ಮತ್ತು 51/4 ರ ಜಮೀನುಗಳನ್ನು ಅಳತೆ ಮಾಡಿರುವುದು ಮತ್ತು ಸದರಿ ಹದ್ದು ಬಸ್ತು ನಕ್ಷೆಯಲ್ಲಿ ಶರಾ (1) ಹದ್ದು ಬಸ್ತು ಅಳತೆಗಳನ್ನು ಭೂದಾಖಲೆಗಳ ಸಹಾಯಕ ನಿರ್ಧೇಶಕರವರ ಆದೇಶದ ಸಂಖ್ಯೆ BNN/HBC-88+89+90 ರ ಪ್ರಕಾರ ಅಳತೆ ಮಾಡಿದೆ. (2) ಸರ್ವೆ ನಂಬರು, ಹಿಸ್ಸಾ , ಹದ್ದು ಬಸ್ತನ್ನು ಮೂಲ ಹಿಸ್ಸಾ ಟಿಪ್ಪಣಿಯಲ್ಲಿನ ಅಳತೆಯಂತೆ ಗುರುತಿಸಿದೆ. ಅರ್ಜಿದಾರನ ಪ್ರದೇಶವನ್ನು ಬಾಜು ಸರ್ವೆ ನಂಬರಿನ ಹಿಡುವಳಿದಾರರು ಒತ್ತುವರಿ ಮಾಡಿರುತ್ತಾರೆ. ಅರ್ಜಿದಾರನ ಕ.ಸ.ನಂಃ51/1 ರಲ್ಲಿ ಕ.ಸ,ನಂ 51/2 ರ ಮಾಲೀಕರು ಅತಿಕ್ರಮಣ ಮಾಡಿದ ಕ್ಷೇತ್ರ 01 ಎಕರೆ ಇರುತ್ತದೆ. ಅರ್ಜಿದಾರನ ಕ.ಸ.ನಂಃ51/2 ರಲ್ಲಿ ಕ.ಸ,ನಂ 51/3 ರ ಮಾಲೀಕರು ಅತಿಕ್ರಮಣ ಮಾಡಿದ ಕ್ಷೇತ್ರ 01 ಎಕರೆ 20 ಗುಂಟೆ ಇರುತ್ತದೆ.ಅರ್ಜಿದಾರನ ಕ.ಸ.ನಂಃ51/3 ರಲ್ಲಿ ಕ.ಸ,ನಂ 51/4 ರ ಮಾಲೀಕರು ಅತಿಕ್ರಮಣ ಮಾಡಿದ ಕ್ಷೇತ್ರ 02 ಎಕರೆ ಇರುತ್ತದೆ ಎಂದು ನಮೂದಿಸಿರುವುದು ಕಂಡು ಬರುತ್ತದೆ.

22. ನಿ.ಡಿ-2 ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಹುಣಶ್ಯಾಳ ಪಿಬಿ ಗ್ರಾಮದ ಸರ್ವೆ ನಂಃ 51/1 ಅ ವಿಸ್ತೀರ್ಣ 03 ಎಕರೆ 03 ಗುಂಟೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂ ನಲ್ಲಿ ದೀಲಿಪಕುಮಾರ ತಂದೆ ನಿಂಗೊಂಡಪ್ಪ ಮುಳವಾಡರವರ ಹೆಸರು ನಮೂದಾಗಿರುವುದು ಕಂಡು ಬರುತ್ತದೆ. ನಿ.ಡಿ-3 ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಹುಣಶ್ಯಾಳ ಪಿಬಿ ಗ್ರಾಮದ ಸರ್ವೆ ನಂಃ 51/1 ಬ ವಿಸ್ತೀರ್ಣ 03 ಎಕರೆ 03 ಗುಂಟೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂ ನಲ್ಲಿ ರಮೇಶ ನಿಂಗೊಂಡಪ್ಪ ಮುಳವಾಡರವರ ಹೆಸರು ನಮೂದಾಗಿರುವುದು ಕಂಡು ಬರುತ್ತದೆ. ನಿ.ಡಿ-4 ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಹುಣಶ್ಯಾಳ ಪಿಬಿ ಗ್ರಾಮದ ಸರ್ವೆ ನಂಃ 51/2 ವಿಸ್ತೀರ್ಣ 03 ಎಕರೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂ ನಲ್ಲಿ ನಿಂಗಪ್ಪ ತಂದೆ ಲಕ್ಷ್ಮಣ ಆಲೂರರವರ ಹೆಸರು ನಮೂದಾಗಿರುವುದು ಕಂಡು ಬರುತ್ತದೆ. ನಿ.ಡಿ-5 ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಹುಣಶ್ಯಾಳ ಪಿಬಿ

ಗ್ರಾಮದ ಸರ್ವೆ ನಂ: 51/3 ವಿಸ್ತೀರ್ಣ 03 ಎಕರೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂ ನಲ್ಲಿ ಶ್ರೀಧರ ತಂದೆ ಭೀಮನಗೌಡ ಆಲೂರರವರ ಹೆಸರು ನಮೂದಾಗಿರುವುದು ಕಂಡು ಬರುತ್ತದೆ. ನಿ.ಡಿ-6 ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಹುಣಶ್ಯಾಳ ಪಿಬಿ ಗ್ರಾಮದ ಸರ್ವೆ ನಂ: 51/4 ಬ ವಿಸ್ತೀರ್ಣ 06 ಎಕರೆ 20 ಗುಂಟೆ ಜಮೀನಿನ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂ ನಲ್ಲಿ ಲಕ್ಷ್ಮೀ ಬಸಪ್ಪ ಮೇಟಿ ಹಾಗೂ ಇತರರ ಹೆಸರು ನಮೂದಾಗಿರುವುದು ಕಂಡು ಬರುತ್ತದೆ. ನಿ.ಡಿ-7 ಮ್ಯುಟೇಶನ ರಜಿಸ್ಟರ ಪ್ರತಿಯನ್ನು ಹಾಜರು ಪಡಿಸಿದ್ದು, ಸದರಿ ಮ್ಯುಟೇಶನ ರಜಿಸ್ಟರ ಪ್ರತಿಯನ್ನುಪರಿಶೀಲಿಸಿದಾಗ ಹುಣಶ್ಯಾಳ ಪಿಬಿ ಗ್ರಾಮದ ಸರ್ವೆ ನಂ: 51/*/1 ವಿಸ್ತೀರ್ಣ 06 ಎಕರೆ 06 ಗುಂಟೆ ಜಮೀನಿನ ಹಕ್ಕು ಬದಲಾವಣೆಯಾಗಿ ದೀಲಿಪಕುಮಾರ ನಿಂಗೊಂಡಪ್ಪ ಮುಳವಾಡ ಹಾಗೂ ರಮೇಶ ನಿಂಗೊಂಡಪ್ಪ ಮುಳವಾಡರವರ ಹೆಸರಿನಲ್ಲಿ ನಮೂದಾಗಿರುವುದು ಕಂಡು ಬರುತ್ತದೆ. ಈ ಕುರಿತು ಉಭಯ ಪಕ್ಷಗಾರರ ಪಾಟೀ ಸವಾಲನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ.

23. ಪಿ.ಡಬ್ಲ್ಯೂ-1 ರವರು ತಮ್ಮ ಪಾಟೀ ಸವಾಲಿನಲ್ಲಿ 2 ನೇ ಪ್ರತಿವಾದಿ ತನ್ನ ಅಣ್ಣನಾದ ಭೀಮನಗೌಡರವರ ಮಗ ಎಂದರೆ ಸರಿ . ತನ್ನ ಅಣ್ಣ ತನ್ನ ಆಸ್ತಿಯಲ್ಲಿ 1 ಎಕರೆ 20 ಗುಂಟೆಯನ್ನು ಅತೀಕ್ರಮಣ ಮಾಡಿರುತ್ತಾನೆ. ರಮೇಶ ಹಾಗೂ ದೀಲಿಪಕುಮಾರವರು ತನ್ನ ಕ್ಷೇತ್ರವಾದ 6 ಎಕರೆ 6 ಗುಂಟೆ ಹೊರತುಪಡಿಸಿ ಉಳಿದ ಜಮೀನಕ್ಕೆ ತಾನು ಹಾಗೂ 2 ನೇ ಪ್ರತಿವಾದಿ ಕಬ್ಜಾವಹಿವಾಟಿಯಲ್ಲಿ ಇದ್ದೇವೆ ಎಂದರೆ ಸಾಕ್ಷಿಯು ರಮೇಶ ಹಾಗೂ ದೀಲಿಪಕುಮಾರವರು 6 ಎಕರೆ ಮೇಲೆ ಇರುತ್ತದೆ ಎಷ್ಟು ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. ರಮೇಶ ಹಾಗೂ ದೀಲಿಪಕುಮಾರವರು 6 ಎಕರೆ 6 ಗುಂಟೆ ಹೊರತು ಪಡಿಸಿ ಮತ್ತೇ ಎಷ್ಟು ಹೆಚ್ಚಿನ ಜಮೀನವನ್ನು ಅತಿಕ್ರಮಣ ಮಾಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಅವರು ಅತಿಕ್ರಮಣ ಮಾಡಿರುತ್ತಾರೆ ಎಂದು ತಾನು ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ತಾನು ಈಗ ಸದ್ಯಕ್ಕೆ 2.5 ಎಕರೆ ಕ್ಷೇತ್ರದಷ್ಟು ಸ್ವಾದೀನದಲ್ಲಿದ್ದೇನೆ. ತಾನು 2001 ನೇ ಸಾಲಿನಲ್ಲಿ ತಾನು ಅರ್ಜಿ ನೀಡಿದ ಪ್ರಕಾರ ಭೂಸಹಾಯ ಅಧಿಕಾರಿಗಳು ಸರ್ವೆ ಮಾಡಿದ ನಂತರೆ ನೀಡಿದ ಸೀಟನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆಗ ಎಸ್.ಬಿ.ಐಗಳಿಯವರು ತಾಲೂಕಾ ಸರ್ವೆರವರು ಬಂದು ಅಳತೆ ಮಾಡಿರುತ್ತಾರೆ ಎಂದರೆ ಸರಿ. ಸದರಿಯವರು ನೀಡಿರುವ ಸರ್ವೆ ವರದಿ ಸರಿಯಾಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ 1 ನೇ ಪ್ರತಿವಾದಿಯು ಹಾಜರುಪಡಿಸಿದ ಸರ್ವೆ ವರದಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ

ಎಸ್.ಬಿ.ಐಗಳಿಯವರೆ ನೀಡಿದ ಸರ್ವೆ ವರದಿ ಎಂದು ಗುರುತಿಸಿರುತ್ತಾರೆ. ಆದ ಕಾರಣ ಸದರಿ ಸರ್ವೆ ವರದಿಯು ನಿಡಿ-1 ಎಂದು ಗುರುತಿಸಲಾಯಿತು. ಸದರಿ ವರದಿಯನ್ನು 51/1 ಜಮೀನದ ಮಾಲೀಕರ ಜಾಗದಲ್ಲಿ ಜಮೀನ ಸರ್ವೆ ನಂ.51/2 ರ ಮಾಲೀಕರು 1 ಎಕರೆ 00 ಗುಂಟೆಯನ್ನು ಅತಿಕ್ರಮಣ ಮಾಡಿರುತ್ತಾರೆಂದು ಬರೆದ ಷರಹ ಸರಿ ಇರುತ್ತದೆ. ಸರ್ವೆ ನಂ.ಬರ 51/3 ರ ಮಾಲೀಕರು ಆದ ತನ್ನ ಅಣ್ಣನ ಮಗ ತನ್ನ ಜಮೀನದಲ್ಲಿ 1 ಎಕರೆ 20 ಗುಂಟೆಯನ್ನು ಅತಿಕ್ರಮಣ ಮಾಡಿರುತ್ತಾನೆ ಎಂದರೆ ಸರಿ. ಸದರಿ ಪ್ರಕಾರ ಷರ ಕೂಡಾ ಸರಿ ಇರುತ್ತದೆ. ಸರ್ವೆ ನಂಬರ 51/4 ರ ಮಾಲೀಕರು 2 ನೇ ಪ್ರತಿವಾದಿಯ ಜಮೀನದಲ್ಲಿ 2 ಎಕರೆ ದಷ್ಟು ಅತಿಕ್ರಮಣ ಮಾಡಿರುತ್ತಾರೆ ಎಂದರೆ ಸರಿ. ಜಮೀನ ಸರ್ವೆ ನಂ.51/4 ಮಾಲೀಕರು ಶಿವಪ್ಪ ಗುರುಪಾದಪ್ಪ ಮೇಟೆಯವರು ಇದ್ದರು. ಸದರಿ ಶಿವಪ್ಪ ಮೇಟಿಯವರು 2 ನೇ ಪ್ರತಿವಾದಿಯ ಜಮಿನದಲ್ಲಿ 2 ಎಕರೆ ಕ್ಷೇತ್ರವನ್ನು ಒತ್ತುವರಿ ಮಾಡಿದ್ದರು. ಅದರಂತೆ 2 ನೇ ಪ್ರತಿವಾದಿಯು ತನ್ನ ಜಮೀನದಲ್ಲಿ 1 ಎಕರೆ 20 ಗುಂಟೆ ಅತಿಕ್ರಮಣ ಮಾಡಿದ್ದು ಅದರಂತೆ ತಾನು 1 ನೇ ಪ್ರತಿವಾದಿಯ ಜಮೀನದಲ್ಲಿ 1 ಎಕರೆ ಜಮೀನವನ್ನು ಒತ್ತುವರಿ ಮಾಡಿರುತ್ತೇನೆ ಎಂದರೆ ಸರಿ. ಪ್ರಸ್ತೂತ ದಾವೆಯಲ್ಲ ಶಿವಪ್ಪ ಗುರುಪಾದಪ್ಪ ಸದರಿ ಶಿವಪ್ಪ ಮೇಟಿಯವರನ್ನು ಪಕ್ಷಗಾರರಾಗಿ ಸೇರಿಸಿರುವುದಿಲ್ಲ. ಸದರಿ ಶಿವಪ್ಪ ಮೇಟಿಯವರು 2 ನೇ ಪ್ರತಿವಾದಿಯ ಜಮೀನದಲ್ಲಿ ಒತ್ತುವರಿ ಮಾಡಿದ್ದರಿಂದ 2 ನೇ ಪ್ರತಿವಾದಿಯು ತನ್ನ ಜಮೀನದಲ್ಲಿ ಒತ್ತುವರಿ ಮಾಡಿದ್ದರಿಂದ ತಾನು ಸದರಿಯವರ ವಿರುದ್ಧ ದಾವೆ ಹೂಡಬೇಕೆ ಹೊರುತು 1 ನೇ ಪತ್ರಿವಾದಿಯ ವಿರುದ್ಧ ಅಲ್ಲ ಎಂದರೆ ತಾನು 1 ನೇ ಪ್ರತಿವಾದಿಯ ವಿರುದ್ಧ ದಾವೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ತಾನು 1 ನೇ ಪ್ರತಿವಾದಿಯು ವಿರುದ್ಧ ದಾವೆ ಹೂಡಿದ್ದರು 1 ನೇ ಪ್ರತಿವಾದಿಯು 1 ಎಕರೆ ಕ್ಷೇತ್ರವನ್ನು ವಾದಿಯೇ ಅತಿಕ್ರಮಣ ಮಾಡಿದ ಸದರಿಯದ್ದನ್ನು ಬಿಡಿಸಿ ಕೊಡಬೇಕೆಂದು ಎದುರು ಕ್ಷೇಮು ಹಾಕಿರುತ್ತಾರೆ ಎಂದರೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

24. ಪಿ.ಡಬ್ಲ್ಯೂ-2 ರವರು ತಮ್ಮ ಪಾಟೀ ಸವಾಲಿನಲ್ಲಿ 1 ನೇ ಪ್ರತಿವಾದಿಯ ಆಸ್ತಿಯ ಸರ್ವೆ ನಂ: 51/1 ಬಿ ವಿಸ್ತೀರ್ಣ 03 ಎಕರೆ 03 ಗುಂಟೆ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಆದರೆ ತಾನು ಉತಾರೆಯನ್ನು ನೋಡಿರುವುದಿಲ್ಲ ಎಂದು ಹೇಳುತ್ತಾರೆ. ತಾನು ವಾದಿಯ ಆಸ್ತಿಯ ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ. ತನ್ನ ಮಗ ಶ್ರೀಧರರವರ ಆಸ್ತಿಯು 03 ಎಕರೆ ಇರುತ್ತದೆ. ಆಸ್ತಿಯ ಸರ್ವೇ

ನಂ.51/1/ಎ ರ ಆಸ್ತಿಯು ಯಾರ ಹೆಸರಿನಲ್ಲಿ ಇರುತ್ತದೆ ಎಂಬುದು ತನಗೆ ಗೊತ್ತಿಲ್ಲ. ವಾದಿ ಮತ್ತು 1 ನೇ ಪ್ರತಿವಾದಿಯ ಜಮೀನುಗಳನ್ನು ತಾನು ನೋಡಿರುತ್ತೇನೆ. ವಾದಿಯ ಜಮೀನನ್ನು 1 ನೇ ಪ್ರತಿವಾದಿಯ ಒತ್ತುವರಿ ಮಾಡಿರುತ್ತಾನೆ. ವಾದಿಗೆ ಸೇರಿದ ಎಷ್ಟು ಆಸ್ತಿಯನ್ನು 1 ನೇ ಪ್ರತಿವಾದಿಯು ಒತ್ತುವರಿ ಮಾಡಿರುತ್ತಾನೆಂದು ತನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ವಾದಿಯ ಆಸ್ತಿಯನ್ನು ಯಾವುದೇ ರೀತಿಯಲ್ಲಿ ಒತ್ತುವರಿ ಮಾಡದೇ ಇದ್ದರೂ ಕೂಡಾ 1 ನೇ ಪ್ರತಿವಾದಿಯು ವಾದಿಯ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ ಆಸ್ತಿಯು ಮೊದಲಿಗೆ ಚಪ್ಪರಬಂದರವರ ಹೆಸರಿನಲ್ಲಿತ್ತು. 2 ನೇ ಪ್ರತಿವಾದಿಯು ನೇರವಾಗಿ ತನ್ನ ಹೆಸರನಲ್ಲಿ ಆಸ್ತಿಯನ್ನು ಖರೀದಿಸಿರುತ್ತಾನೆ. 2 ನೇ ಪ್ರತಿವಾದಿಯು ಆಸ್ತಿಯನ್ನು ಯಾವಾಗ ಖರೀದಿಸಿರುತ್ತಾನೆ ಎಂದು ತನಗೆ ಗೊತ್ತಿಲ್ಲ. ವಾದಿಯು ತನ್ನ ಆಸ್ತಿಯನ್ನು ಚಪ್ಪರಬಂದರವರ ಕಡೆಯಿಂದ ಖರೀದಿಸಿರುತ್ತಾನೆ. ಸದರಿ ವಾದಿಯು ತನ್ನ ಆಸ್ತಿಯನ್ನು ಯಾವಾಗ ಖರೀದಿಸಿರುತ್ತಾನೆ ಎಂಬುದು ತನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ತಂದೆಯು ತಮ್ಮ ಆಸ್ತಿಯನ್ನು ಯಾವಾಗ ಮತ್ತು ಯಾರಿಂದ ಖರೀದಿಸಿರುತ್ತಾನೆ ಎಂದು ತನಗೆ ಗೊತ್ತಿಲ್ಲ. ಸರ್ವೇ ನಂ.51/4 ರ ಆಸ್ತಿಯು ಹೆಸರಿನಲ್ಲಿ ಇರುತ್ತದೆ ಎಂದು ತನಗೆ ಗೊತ್ತಿಲ್ಲ. ಸರ್ವೇ ನಂ.51/4 ರ ಆಸ್ತಿಯ ಮಾಲೀಕರು ತನ್ನ ಮಗನ ಹೆಸರಿನಲ್ಲಿರುವ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸರ್ವೇ ನಂ.51/2 ರ ಆಸ್ತಿಯು ಮಾಲೀಕರಾದ ವಾದಿಯು 1 ನೇ ಪ್ರತಿವಾದಿಯ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆ ಎಂದರೆ ತನಗೆ ಗೊತ್ತಿಲ್ಲ. ಅದೇ ರೀತಿಯಾಗಿ ವಾದಿಯು ತಮ್ಮ ಆಸ್ತಿಯನ್ನು ಸಹ ಒತ್ತುವರಿ ಮಾಡಿರುತ್ತಾರೆ ಎಂದರೆ ತನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಆಸ್ತಿಯು ಒತ್ತುವರಿ ಆಗಿರುವ ವಿಷಯವು 1 ನೇ ಪ್ರತಿವಾದಿಗೆ ಗೊತ್ತಾದ ನಂತರ 1 ನೇ ಪ್ರತಿವಾದಿ ಮತ್ತು ಅವನ ಸಹೋದರ ಇಬ್ಬರೂ ಸೇರಿ ಆಸ್ತಿಗಳನ್ನು ಅಳತೆ ಮಾಡಲು ಸರ್ವೇ ಇಲಾಖೆಗೆ ಅರ್ಜಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಎಸ್.ಪಿ ಐಗಳೆ ಎಂಬ ಸರಕಾರಿ ಸರ್ವೇಯರ್ ರವರು ಜಮೀನುಗಳನ್ನು ದಿ:28.07.2001 ರಲ್ಲಿ ಅಳತೆ ಮಾಡಲು ಬಂದಾಗ ತಾನು ಹಾಜರಿದ್ದೆ ಎಂದರೆ ಸಾಕ್ಷಿಯು ತನಗೆ ನೆನಪು ಇಲ್ಲ ಎಂದು ಹೇಳುತ್ತಾರೆ. ತಾನು ಹಾಜರಿದ್ದರು ಕೂಡಾ ತನಗೆ ನೆನಪು ಇಲ್ಲ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು 2ನೇ ಪ್ರತಿವಾದಿಯ ವಿರುದ್ಧ ಸಲ್ಲಿಸಿರುವ ಅಸಲು ದಾವೆ ಸಂಖ್ಯೆ ನಂಬರ ತನಗೆ ಗೊತ್ತಿಲ್ಲ. ಸರ್ವೇ ನಂ.51/4 ರ ಆಸ್ತಿಯ ಮಾಲೀಕರು 2ನೇ ಪ್ರತಿವಾದಿಯ ಜಮೀನಿನಲ್ಲಿ ಒತ್ತುವರಿ ಮಾಡಿದಾಗ ಮತ್ತು ವಾದಿಯು 1 ಮತ್ತು 2ನೇ ಪ್ರತಿವಾದಿಯರ ಜಮೀನುಗಳಲ್ಲಿ ಒತ್ತುವರಿ ಮಾಡಿರುವ ವಿಷಯವಾಗಿ ಹಿರಿಯರ ಸಮಕ್ಷಮದಲ್ಲಿ ರಾಜಿ ಪಂಚಾಯತಿ ಆಗಿದೆ ಎಂದರೆ ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

25. ಡಿ.ಡಬ್ಲ್ಯೂ-1 ರವರು ತಮ್ಮ ಪಾಟೀ ಸವಾಲಿನಲ್ಲಿ ವಾದಿಯ ತನ್ನ ಹಾತ ನಕಾಶೆಯಲ್ಲಿ ಎಮ್ ಎನ್ ಎಂದು ಗುರುತಿಸಿರುವ ಕ್ಷೇತ್ರದಲ್ಲಿ ಒಡ್ಡು ಮತ್ತು ಗಿಡಗಳು ಇರುತ್ತವೆ ಎಂದರೆ ಸಾಕ್ಷಿಯು ವಾದಿಯು ಒತ್ತುವರಿ ಮಾಡಿ ಒಡ್ಡನ್ನು ಹಾಕಿರುತ್ತಾರೆ ಎಂದು ಹೇಳುತ್ತಾರೆ. ತನ್ನ, 2ನೇ ಪ್ರತಿವಾದಿಯ ಮತ್ತು ವಾದಿಯ ಆಸ್ತಿಯನ್ನು 2002ರಲ್ಲಿ ಅಳತೆ ಮಾಡಿಸಿರುತ್ತೇವೆ. ತಾನು ಅಳತೆ ಮಾಡಿಸಿರುವ ಕುರಿತು ಪಿ.ಟಿ ಶೀಟ್ ನ್ನು ತಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಾದಿಯು ತನ್ನ ಜಮೀನದಲ್ಲಿ ಪೈಪ್ ಲೈನ್ ಮಾಡಿಸಿರುತ್ತಾರೆ ಎಂದರೆ ಸಾಕ್ಷಿಯು ವಾದಿಯು ಒತ್ತುವರಿ ಮಾಡಿ ಪೈಪ್ ಲೈನ್ ಮಾಡಿಸಿರುತ್ತಾರೆ ಎಂದು ಹೇಳುತ್ತಾರೆ. ತಾನು 2017ನೇ ಸಾಲಿನಲ್ಲಿ ಒಡ್ಡಿನ ಮೇಲಿರುವ ಪೈಪ್ ಲೈನ್ ನ್ನು ಮತ್ತು ಗಿಡಗಳನ್ನು ಕಟ್ ಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ತಮ್ಮ ಊರಿನ ಹಿರಿಯರು ತಮಗೆ ಬುದ್ಧಿವಾದ ಹೇಳಿರುತ್ತಾರೆ ಎಂದರೆ ಸಾಕ್ಷಿಯು ವಾದಿಯು ಒತ್ತುವರಿ ಮಾಡಿರುವ ಜಮೀನನ್ನು ತಮಗೆ ಬಿಟ್ಟುಕೊಡುವಂತೆ ವಾದಿಗೆ ಹಿರಿಯರು ಹೇಳಿರುತ್ತಾರೆ ಎಂದು ಹೇಳುತ್ತಾರೆ. ವಾದಿಯು ತಮ್ಮ ಜಮೀನದಲ್ಲಿ 01 ಎಕರೆ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ತಾನು ಅಳತೆ ಮಾಡಿಸುವಾಗ ವಾದಿಯ ಸಹೋದರರ ಜಮೀನುಗಳನ್ನು ಅಳತೆ ಮಾಡಿಸಿಲ್ಲ ಎಂದರೆ ಸರಿಯಲ್ಲ. ವಾದಿಯು ತನ್ನ ಜಮೀನನ್ನು ದಿಃ 02.05.2016ರಂದು ಅಳತೆ ಮಾಡಿಸಿರುತ್ತಾರೆ ಎಂದರೆ ತನಗೆ ಗೊತ್ತಿಲ್ಲ. ಸದರಿ ಅಳತೆಯ ಸಮಯದಲ್ಲಿ ತಾನು ವಾದಿಯ ಆಸ್ತಿಯನ್ನು ಒತ್ತುವರಿ ಮಾಡಿರುತ್ತೇನೆ ಎಂದು ಸರ್ವೆ ಇಲಾಖೆಯವರು ವರದಿ ಕೊಟ್ಟಿರುತ್ತಾರೆ ಎಂದರೆ ಸರಿ ಎಂದು ನುಡಿದಿರುತ್ತಾರೆ.

26. ಈ ವಿವಾದಾಂಶಗಳ ಕುರಿತಾಗಿ ವಾದಿಯು ಹಾಜರುಪಡಿಸಿರುವಂತಹ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಸದರಿ ವಾದಿಯು ಹಾಜರುಪಡಿಸಿರುವ ನಿಪಿ-**1** ರಿಂದ **3** ಮತ್ತು **1** ನೇ ಪ್ರತಿವಾದಿಯು ಹಾಜರುಪಡಿಸಿರುವ ನಿಡಿ-**2** ರಿಂದ **4** ರ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಿದಾಗ ದಾವಾ ಆಸ್ತಿ ಸರ್ವೆ ನಂ **51/2** ಕ್ಷೇತ್ರ **3** ಎಕರೆ ಜಮೀನಿಗೆ ವಾದಿಯು, **1** ನೇ ಪ್ರತಿವಾದಿಯು ಸರ್ವೆ ನಂ: **51/1** ಬ ಕ್ಷೇತ್ರ **3** ಎಕರೆ **3** ಗುಂಟೆ ಜಮೀನಿಗೆ ಮತ್ತು **2** ನೇ ಪ್ರತಿವಾದಿಯು ಸರ್ವೆ ನಂ: **51/3** ಕ್ಷೇತ್ರ **3** ಎಕರೆ ಜಮೀನಿಗೆ ಮಾಲೀಕತ್ವವನ್ನು ಹೊಂದಿ ಸ್ವಾಧೀನಾನುಭದಲ್ಲಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

**27.** ವಾದಿಯು ತನ್ನ ಆಸ್ತಿ ಸರ್ವೆ ನಂ: **51/2** ರ ಆಸ್ತಿಯ ಪೂರ್ವಕ್ಕೆ ಓ.ಪಿ ಮತ್ತು ಪಶ್ಚಿಮ ಎಮ್. ಎನ್ ಒಡ್ಡುಗಳು ಅಸ್ತಿತ್ವದಲ್ಲಿರುತ್ತವೆ ಮತ್ತು ಸದರಿ ಎಮ್.ಎನ್ ಮತ್ತು ಓ.ಪಿ ಒಡ್ಡುಗಳು ದಾವಾ ಆಸ್ತಿ ಸರ್ವೆ ನಂ: **51/2** ರ ಆಸ್ತಿಯ ಭಾಗಗಳಾಗಿರುತ್ತವೆ ಎಂಬುವುದನ್ನು ರುಜುವಾತು ಪಡಿಸಲು ವಾದಿಯು ನಿಪಿ-**4** ರಿಂದ **7** ರಂತೆ ಛಾಯಾ ಚಿತ್ರಗಳನ್ನು ಮತ್ತು ಒಂದು ಸಿಡಿಯನ್ನು ಹಾಜರುಪಡಿಸಿದ್ದು, ಸದರಿ ಛಾಯಾ ಚಿತ್ರಗಳನ್ನು ಪರಿಶೀಲಿಸಿದಾಗ ಜಮೀನುಗಳು, ಜಮೀನುಗಳ ಮಧ್ಯದಲ್ಲಿ ಒಂದು ಒಡ್ಡು, ಸದರಿ ಒಡ್ಡಿನ ಮೇಲೆ ಗಿಡಗಳು ಅಸ್ತಿತ್ವದಲ್ಲಿರುವುದು ಕಂಡು ಬರುತ್ತದೆ. ಈ ಕುರಿತು ಡಿ.ಡಬ್ಲ್ಯೂ-**1** ರವರ ಪಾಟೀ ಸವಾಲಿನಲ್ಲಿ ವಾದಿ ಪರ ವಕೀಲರು ಪ್ರಶ್ನೆಗಳನ್ನು ಕೇಳಿರುತ್ತಾರೆ. ಈ ಕುರಿತು ಡಿ. ಡಬ್ಲ್ಯೂ-**1** ರವರ ಪಾಟೀ ಸವಾಲನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ .

**28.** ಡಿ. ಡಬ್ಲ್ಯೂ-**1** ರವರು ತಮ್ಮ ಪಾಟೀ ಸವಾಲಿನಲ್ಲಿ ವಾದಿಯು ಈ ದಾವೆಯಲ್ಲಿ ತನ್ನ ವಾದಪತ್ರದೊಂದಿಗೆ ಹಾಜರುಪಡಿಸಿರುವ ನಕಾಶೆಯನ್ನು ತಾನು ನೋಡಿರುತ್ತೇನೆ. ವಾದಿಯು ತನ್ನ ಹಾತ ನಕಾಶೆಯಲ್ಲಿ ಎಮ್.ಎನ್.ಓ.ಪಿ ಎಂದು ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ತೋರಿಸಿರುತ್ತಾರೆ ಎಂದು ಹೇಳುತ್ತಾರೆ. ವಾದಿಯು ತನ್ನ ಹಾತ ನಕಾಶೆಯಲ್ಲಿ ಓ.ಆರ್.ಕ್ಯೂ ಎಂದು ಸರ್ವೇ ನಂ. 51/3 ರ ಆಸ್ತಿಯನ್ನು ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ತೋರಿಸಿರುತ್ತಾರೆ ಎಂದು ಹೇಳುತ್ತಾರೆ. ವಾದಿಯು ತನ್ನ ಹಾತ ನಕಾಶೆಯಲ್ಲಿ ಎಮ್.ಎನ್.ಎಸ್.ಪಿ ಎಂದು ಸರ್ವೇ ನಂ. 51/1 ಬ ರ ಆಸ್ತಿಯನ್ನು ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು

ತೋರಿಸಿರುತ್ತಾರೆ ಎಂದು ಹೇಳುತ್ತಾರೆ. ವಾದಿಯು ತನ್ನ ಹಾತ ನಕಾಶೆಯಲ್ಲಿ ಎಮ್. ಎನ್ ಎಂದು ತೋರಿಸಿರುವ ಕ್ಷೇತ್ರದಲ್ಲಿ ಒಡ್ಡು ಮತ್ತು ಗಿಡಗಳು ಇರುತ್ತವೆ ಎಂದರೆ ಸಾಕ್ಷಿಯು ವಾದಿಯು ಒತ್ತುವರಿ ಮಾಡಿ ಒಡ್ಡನ್ನು ಹಾಕಿರುತ್ತಾರೆ ಎಂದು ಹೇಳುತ್ತಾರೆ. ತನ್ನ, 2 ನೇ ಪ್ರತಿವಾದಿಯ ಮತ್ತು ವಾದಿಯ ಆಸ್ತಿಯನ್ನು 2002 ರಲ್ಲಿ ಅಳತೆ ಮಾಡಿಸಿರುತ್ತೇವೆ. ತಾನು ಅಳತೆ ಮಾಡಿಸಿರುವ ಕುರಿತು ಪಿ.ಟಿ ಶೀಟ್ ನ್ನು ತಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಾದಿಯು ತನ್ನ ಜಮೀನದಲ್ಲಿ ಪೈಪ್ ಲೈನ್ ಮಾಡಿಸಿರುತ್ತಾರೆ ಎಂದರೆ ಸಾಕ್ಷಿಯು ವಾದಿಯು ಒತ್ತುವರಿ ಮಾಡಿ ಪೈಪ್ ಲೈನ್ ಮಾಡಿಸಿರುತ್ತಾರೆ ಎಂದು ಹೇಳುತ್ತಾರೆ. ತಾನು 2017 ನೇ ಸಾಲಿನಲ್ಲಿ ಒಡ್ಡಿನ ಮೇಲಿರುವ ಪೈಪ್ ಲೈನ್ ನ್ನು ಮತ್ತು ಗಿಡಗಳನ್ನು ಕಟ್ ಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ತಮ್ಮ ಊರಿನ ಹಿರಿಯರು ತಮಗೆ ಬುದ್ದಿವಾದ ಹೇಳಿರುತ್ತಾರೆ ಎಂದರೆ ಸಾಕ್ಷಿಯು ವಾದಿಯು ಒತ್ತುವರಿ ಮಾಡಿರುವ ಜಮೀನನ್ನು ತಮಗೆ ಬಿಟ್ಟುಕೊಡುವಂತೆ ವಾದಿಗೆ ಹಿರಿಯರು ಹೇಳಿರುತ್ತಾರೆ ಎಂದು ಹೇಳುತ್ತಾರೆ. ವಾದಿಯು ತಮ್ಮ ಜಮೀನದಲ್ಲಿ 01 ಎಕರೆ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ತಾನು ಅಳತೆ ಮಾಡಿಸುವಾಗ ವಾದಿಯ ಸಹೋದರರ ಜಮೀನುಗಳನ್ನು ಅಳತೆ ಮಾಡಿಸಿಲ್ಲ ಎಂದರೆ ಸರಿಯಲ್ಲ. ವಾದಿಯು ತನ್ನ ಜಮೀನನ್ನು ದಿಃ 02.05.2016 ರಂದು ಅಳತೆ ಮಾಡಿಸಿರುತ್ತಾರೆ ಎಂದರೆ ತನಗೆ ಗೊತ್ತಿಲ್ಲ. ಸದರಿ ಅಳತೆಯ ಸಮಯದಲ್ಲಿ ತಾನು ವಾದಿಯ ಆಸ್ತಿಯನ್ನು ಒತ್ತುವರಿ ಮಾಡಿರುತ್ತೇನೆ ಸರ್ವೆ ಇಲಾಖೆಯವರು ವರದಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಅಳತೆಯ ಸಮಯದಲ್ಲಿ ಸರ್ವೆ ನಂ.51/4 ರವರು ತನ್ನ ಆಸ್ತಿಯಲ್ಲಿ ಒತ್ತುವರಿ ಮಾಡಿರುತ್ತಾರೆ ಎಂದು ಸರ್ವೆ ಇಲಾಖೆಯವರು ವರದಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ತಾನು ವಾದಿಯ ಜಮೀನದಲ್ಲಿರುವ ಒಡ್ಡನ್ನು ಮತ್ತು ಗಿಡಗಳನ್ನು ಕಡಿದು ನಾಶ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ತನ್ನ ಹಾತ ನಕಾಶೆಯಲ್ಲಿ ತೋರಿಸಿರುವ ಎಮ್.ಎನ್ ಕ್ಷೇತ್ರ ಎಂದು ತೋರಿಸಿರುವ ಆಸ್ತಿಯ ಮೇಲೆ ತನಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

**29.** ಈ ಮೇಲಿನ ಡಿ.ಡಬ್ಲ್ಯೂ**1** ರವರ ಪಾಟೀ ಸವಾಲನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ವಾದಿ ತನ್ನ ಹಾತ ನಕಾಶೆಯಲ್ಲಿ 'ಎಮ್ ಎನ್' ಹಾಗೂ 'ಓ .ಪಿ' ಎಂದು ತೋರಿಸಿರುವ ಕ್ಷೇತ್ರದಲ್ಲಿ ಒಡ್ಡು ಮತ್ತು ಗಿಡಗಳು ಇರುತ್ತವೆ ಮತ್ತು 'ಎಮ್ ಎನ್' ಹಾಗೂ 'ಓ .ಪಿ' ಒಡ್ಡುಗಳು ಸರ್ವೆ ನಂ: **51/2** ರ ಭಾಗಗಳಾಗಿರುತ್ತವೆ ಎಂಬುದರ ಕುರಿತು ಡಿ.ಡಬ್ಲ್ಯೂ**-1** ರವರು ನಿರ್ಧಿಷ್ಟವಾಗಿ ಅಲ್ಲಗಳೆದು ವಾದಿಯೇ **1** ನೇ ಪ್ರತಿವಾದಿಗೆ ಸೇರಿದ **1** ಎಕರೆ ಜಮೀನನ್ನು ಒತ್ತುವರಿ ಮಾಡಿ ಒಡ್ಡನ್ನು ಹಾಕಿರುತ್ತಾನೆ ಎಂಬುದರ ಕುರಿತು ನಿರ್ಧಿಷ್ಟವಾಗಿ ಸಾಕ್ಷ್ಯವನ್ನು ನುಡಿದಿರುವುದು ಕಂಡು ಬರುತ್ತದೆ.

**30.** ಈ ಮೇಲಿನ ಉಭಯ ಪಕ್ಷಗಾರರ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ವಾದಿಯು ತನ್ನ ಆಸ್ತಿ ಸರ್ವೆ ನಂ: **51/2** ರ ಆಸ್ತಿಯ ಪೂರ್ವಕ್ಕೆ ಓ.ಪಿ ಮತ್ತು ಪಶ್ಚಿಮಕ್ಕೆ ಎಮ್. ಎನ್ ಒಡ್ಡುಗಳು ಅಸ್ತಿತ್ವದಲ್ಲಿರುತ್ತವೆ ಮತ್ತು ಸದರಿ ಎಮ್.ಎನ್ ಮತ್ತು ಓ.ಪಿ ಒಡ್ಡುಗಳು ದಾವಾ ಆಸ್ತಿ ಸರ್ವೆ ನಂ: **51/2** ರ ಆಸ್ತಿಯ ಭಾಗಗಳಾಗಿರುತ್ತವೆ ಎಂಬುದನ್ನು ರುಜುವಾತು ಪಡಿಸಲು ವಾದಿಯು ನಿಪಿ**-4** ರಿಂದ **6** ರ ಛಾಯಾ ಚಿತ್ರಗಳನ್ನು ಹೊರತು ಪಡಿಸಿ ಬೇರೆ ಯಾವುದೇ ಸಾಕ್ಷ್ಯಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ . ಹಾಗಾಗಿ ವಾದಿಯು ತನ್ನ ಆಸ್ತಿ ಸರ್ವೆ ನಂ: **51/2** ರ ಆಸ್ತಿಯ ಪೂರ್ವಕ್ಕೆ ಓ.ಪಿ ಮತ್ತು ಪಶ್ಚಿಮಕ್ಕೆ ಎಮ್.ಎನ್ ಒಡ್ಡುಗಳು ಅಸ್ತಿತ್ವದಲ್ಲಿರುತ್ತವೆ ಮತ್ತು ಸದರಿ ಎಮ್.ಎನ್ ಮತ್ತು ಓ.ಪಿ ಒಡ್ಡುಗಳು ದಾವಾ ಆಸ್ತಿ ಸರ್ವೆ ನಂ: **51/2** ರ ಆಸ್ತಿಯ ಭಾಗಗಳಾಗಿರುತ್ತವೆ ಎಂಬುದನ್ನು ವಾದಿಯು ಪ್ರಭಲವಾದ ಮತ್ತು ನ್ಯಾಯಾಲಯವು ನಂಬಬಹುದಾದ ಸಾಕ್ಷ್ಯಾಧಾರಗಳ ಮೂಲಕ ರುಜುವಾತು ಪಡಿಸಲು ವಿಫಲರಾಗಿರುತ್ತಾರೆ.

**31.** **1** ನೇ ಪ್ರತಿವಾದಿಯು ಹಾಜರುಪಡಿಸಿರುವ ನಿಶಾನೆ ಡಿ**-1** ರ ಪಿ ಟಿ ಶೀಟನ್ನು ಪರಿಶೀಲಿಸಿದಾಗ ಭೂ ದಾಖಲೆಗಳ ಸಹಾಯಕ ನಿರ್ದೆಶಕರು ದಿ: 28-07-2001 ರಂದು ಸರ್ವೆ ನಂ: 51/1 , 51/2, 51/3 ಮತ್ತು 51/4 ರ ಜಮೀನುಗಳನ್ನು ಅಳತೆ ಮಾಡಿರುವುದು ಮತ್ತು ಸದರಿ ಹದ್ದು ಬಸ್ತು ನಕ್ಷೆಯಲ್ಲಿ ಶರಾ (1) ಹದ್ದು ಬಸ್ತು ಅಳತೆಗಳನ್ನು ಭೂದಾಖಲೆಗಳ ಸಹಾಯಕ ನಿರ್ದೇಶಕರವರ ಆದೇಶದ ಸಂಖ್ಯೆ BNN/

HBC-88+89+90 ರ ಪ್ರಕಾರ ಅಳತೆ ಮಾಡಿದೆ. (2) ಸರ್ವೆ ನಂಬರು, ಹಿಸ್ಸಾ , ಹದ್ದು ಬಸ್ತನ್ನು ಮೂಲ ಹಿಸ್ಸಾ ಟಿಪ್ಪಣಿಯಲ್ಲಿನ ಅಳತೆಯಂತೆ ಗುರುತಿಸಿದೆ. ಅರ್ಜಿದಾರನ ಪ್ರದೇಶವನ್ನು ಬಾಜು ಸರ್ವೆ ನಂಬರಿನ ಹಿಡುವಳಿದಾರರು ಒತ್ತುವರಿ ಮಾಡಿರುತ್ತಾರೆ. ಅರ್ಜಿದಾರನ ಕ.ಸ.ನಂ:51/1 ರಲ್ಲಿ ಕ.ಸ.ನಂ 51/2 ರ ಮಾಲೀಕರು ಅತಿಕ್ರಮಣ ಮಾಡಿದ ಕ್ಷೇತ್ರ 01 ಎಕರೆ ಇರುತ್ತದೆ. ಅರ್ಜಿದಾರನ ಕ.ಸ.ನಂ:51/2 ರಲ್ಲಿ ಕ.ಸ,ನಂ 51/3 ರ ಮಾಲೀಕರು ಅತಿಕ್ರಮಣ ಮಾಡಿದ ಕ್ಷೇತ್ರ 01 ಎಕರೆ 20 ಗುಂಟೆ ಇರುತ್ತದೆ ಹಾಗೂ ಅರ್ಜಿದಾರನ ಕ.ಸ.ನಂ:51/3 ರಲ್ಲಿ ಕ.ಸ,ನಂ 51/4 ರ ಮಾಲೀಕರು ಅತಿಕ್ರಮಣ ಮಾಡಿದ ಕ್ಷೇತ್ರ 02 ಎಕರೆ ಇರುತ್ತದೆ ಎಂದು ನಮೂದಿಸಿರುವುದು ಕಂಡು ಬರುತ್ತದೆ.

32. ಈ ಕುರಿತು ಪಿ**.**ಡಬ್ಲ್ಯೂ**1** ರವರು ಸಹ ತಮ್ಮ ಪಾಟೀ ಸವಾಲಿನಲ್ಲಿ ಸರ್ವೆ ನಂ: **51/1** ರ ಜಮೀನಿದ ಮಾಲೀಕರ ಜಾಗದಲ್ಲಿ ಜಮೀನು ಸರ್ವೆ ನಂ: **51/2** ರ ಮಾಲೀಕರು **1** ಎಕರೆಯನ್ನು ಅತಿಕ್ರಮಣ ಮಾಡಿರುತ್ತಾರೆಂದು ಬರೆದ ಶರಹ ಸರಿ ಇರುತ್ತದೆ. ಸರ್ವೆ ನಂಬರ 51/3 ರ ಮಾಲೀಕರು ಆದ ತನ್ನ ಅಣ್ಣನ ಮಗ ತನ್ನ ಜಮೀನದಲ್ಲಿ 1 ಎಕರೆ 20 ಗುಂಟೆಯನ್ನು ಅತಿಕ್ರಮಣ ಮಾಡಿರುತ್ತಾನೆ ಎಂದರೆ ಸರಿ. ಸದರಿ ಪ್ರಕಾರ ಷರ ಕೂಡಾ ಸರಿ ಇರುತ್ತದೆ. ಸರ್ವೆ ನಂಬರ 51/4 ರ ಮಾಲೀಕರು 2 ನೇ ಪ್ರತಿವಾದಿಯ ಜಮೀನದಲ್ಲಿ 2 ಎಕರೆ ದಷ್ಟು ಅತಿಕ್ರಮಣ ಮಾಡಿರುತ್ತಾರೆ ಎಂದರೆ ಸರಿ. ಜಮೀನ ಸರ್ವೆ ನಂ.51/4 ಮಾಲೀಕರು ಶಿವಪ್ಪ ಗುರುಪಾದಪ್ಪ ಮೇಟಿಯವರು ಇದ್ದರು. ಸದರಿ ಶಿವಪ್ಪ ಮೇಟಿಯವರು 2 ನೇ ಪ್ರತಿವಾದಿಯ ಜಮಿನದಲ್ಲಿ 2 ಎಕರೆ ಕ್ಷೇತ್ರವನ್ನು ಒತ್ತುವರಿ ಮಾಡಿದರು. ಅದರಂತೆ 2 ನೇ ಪ್ರತಿವಾದಿಯು ತನ್ನ ಜಮೀನದಲ್ಲಿ 1 ಎಕರೆ 20 ಗುಂಟೆ ಅತಿಕ್ರಮಣ ಮಾಡಿದ್ದು ಅದರಂತೆ ತಾನು 1 ನೇ ಪ್ರತಿವಾದಿಯ ಜಮೀನದಲ್ಲಿ 1 ಎಕರೆ ಜಮೀನವನ್ನು ಒತ್ತುವರಿ ಮಾಡಿರುತ್ತೇನೆ ಎಂದರೆ ಸರಿ. ಪ್ರಸ್ತೂತ ದಾವೆಯಲ್ಲಿ ಶಿವಪ್ಪ ಗುರುಪಾದಪ್ಪ ಸದರಿ ಶಿವಪ್ಪ ಮೇಟಿಯವರನ್ನು ಪಕ್ಷಗಾರರಾಗಿ ಸೇರಿಸಿರುವುದಿಲ್ಲ. ಸದರಿ ಶಿವಪ್ಪ ಮೇಟಿಯವರು 2 ನೇ ಪ್ರತಿವಾದಿಯ ಜಮೀನದಲ್ಲಿ ಒತ್ತುವರಿ ಮಾಡಿದ್ದರಿಂದ 2 ನೇ ಪ್ರತಿವಾದಿಯು ತನ್ನ ಜಮೀನದಲ್ಲಿ ಒತ್ತುವರಿ ಮಾಡಿದ್ದರಿಂದ ತಾನು ಸದರಿಯವರ ವಿರುದ್ಧ ದಾವೆ ಹೂಡಬೇಕೆ ಹೊರುತು 1 ನೇ ಪತ್ರಿವಾದಿಯ ವಿರುದ್ಧ ಅಲ್ಲ ಎಂದರೆ ತಾನು 1 ನೇ ಪ್ರತಿವಾದಿಯ ವಿರುದ್ಧ ದಾವೆ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ**.**

**33.** ಪಿ.ಡಬ್ಲ್ಯೂ-**1** ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ ಪಿ.ಡಬ್ಲ್ಯೂ**1** ರವರು ತಮ್ಮ ಪಾಟೀ ಸವಾಲಿನಲ್ಲಿ ಸರ್ವೆ ನಂ: **51/1** ರ ಜಮೀನಿದ ಮಾಲೀಕರ ಜಾಗದಲ್ಲಿ ಜಮೀನು ಸರ್ವೆ ನಂ: **51/2** ರ ಮಾಲೀಕರು **1** ಎಕರೆಯನ್ನು ಅತಿಕ್ರಮಣ ಮಾಡಿರುತ್ತಾರೆಂದು ಬರೆದ ಶರಹ ಸರಿ ಇರುತ್ತದೆ. ಸರ್ವೆ ನಂಬರ 51/3 ರ ಮಾಲೀಕರು ಆದ ತನ್ನ ಅಣ್ಣನ ಮಗ ತನ್ನ ಜಮೀನದಲ್ಲಿ 1 ಎಕರೆ 20 ಗುಂಟೆಯನ್ನು ಅತಿಕ್ರಮಣ ಮಾಡಿರುತ್ತಾನೆ. ಸದರಿ ಪ್ರಕಾರ ಷರ ಕೂಡಾ ಸರಿ ಇರುತ್ತದೆ. ಸರ್ವೆ ನಂಬರ 51/4 ರ ಮಾಲೀಕರು 2 ನೇ ಪ್ರತಿವಾದಿಯ ಜಮೀನದಲ್ಲಿ 2 ಎಕರೆ ದಷ್ಟು ಅತಿಕ್ರಮಣ ಮಾಡಿರುತ್ತಾರೆ. ಜಮೀನ ಸರ್ವೆ ನಂ.51/4 ಮಾಲೀಕರು ಶಿವಪ್ಪ ಗುರುಪಾದಪ್ಪ ಮೇಟಿಯವರು ಇದ್ದರು. ಸದರಿ ಶಿವಪ್ಪ ಮೇಟಿಯವರು 2 ನೇ ಪ್ರತಿವಾದಿಯ ಜಮಿನದಲ್ಲಿ 2 ಎಕರೆ ಕ್ಷೇತ್ರವನ್ನು ಒತ್ತುವರಿ ಮಾಡಿದರು. ಅದರಂತೆ 2 ನೇ ಪ್ರತಿವಾದಿಯು ತನ್ನ ಜಮೀನದಲ್ಲಿ 1 ಎಕರೆ 20 ಗುಂಟೆ ಅತಿಕ್ರಮಣ ಮಾಡಿರಎತ್ತಾರೆ. ತಾನು 1 ನೇ ಪ್ರತಿವಾದಿಯ ಜಮೀನದಲ್ಲಿ 1 ಎಕರೆ ಜಮೀನವನ್ನು ಒತ್ತುವರಿ ಮಾಡಿರುತ್ತೇನೆ. ಪ್ರಸ್ತೂತ ದಾವೆಯಲ್ಲಿ ಶಿವಪ್ಪ ಗುರುಪಾದಪ್ಪ ಸದರಿ ಶಿವಪ್ಪ ಮೇಟಿಯವರನ್ನು ಪಕ್ಷಗಾರರಾಗಿ ಸೇರಿಸಿರುವುದಿಲ್ಲ ಎಂದು ಒಪ್ಪಿತ ಹೇಳಿಕೆಯನ್ನು ನುಡಿದಿರುತ್ತಾರೆ. **1** ನೇ ಪ್ರತಿವಾದಿಯು ನಿಡಿ-**1** ರ ದಾಖಲಾತಿಯನ್ನು ಹಾಜರುಪಡಿಸಿದ್ದು ಸದರಿ ನಿಡಿ-**1** ದಾಖಲಾತಿಯನ್ನು ಪರಿಗಣಿಸುವ ಕುರಿತು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ: **83** ನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ. ಸದರಿ ಕಾನೂನಿನ ಪರಿಕಲ್ಪನೆ ಈ ಕೆಳಗಿನಂತೆ ಇರುತ್ತದೆ.

**34.** ಕಲಂ: **83:-** ಸರ್ಕಾರದ ಪ್ರಾಧಿಕಾರವು ರಚಿಸಿದ ಭೂಪಟಗಳ ಅಥವಾ ನಕ್ಷೆಗಳ ಪೂರ್ವಭಾವನೆ **(Presumption as to Maps or Plans made by the Authority of Government)**

> ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಪ್ರಾಧಿಕಾರದಿಂದ ತಯಾರಿಸಿರುವ ಭೂ ಪಟಗಳು ಅಥವಾ ನಕ್ಷೆಗಳು ಹಾಗೇ ತಯಾರಿಸಲಾಯಿತು ಎಂದು ಮತ್ತು ಅವು ಸಮರ್ಥವಾಗಿವೆ ಎಂದು ನ್ಯಾಯಾಲಯವು ಪೂರ್ವ ಭಾವನೆಯನ್ನು ಮಾಡತಕ್ಕದ್ದು, ಆದರೆ ಯಾವುದೇ ಕಾರಣದ ಉದ್ದೇಶಗಳಿಗಾಗಿ ರಚಿತವಾದ

ಭೂಪಟಗಳು ಅಥವಾ ನಕ್ಷೆಗಳು ಸಮರ್ಪಕವಾಗಿವೆ ಎಂದು ರುಜುವಾತುಪಡಿಸಬೇಕು.

**35.** ಈ ಮೇಲಿನ ಕಾನೂನಿನ ಪರಿಕಲ್ಪನೆಯನ್ನು ಪರಿಶೀಲಿಸಿದಾಗ ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಪ್ರಾಧಿಕಾರದಿಂದ ತಯಾರಿಸಿರುವ ಭೂ ಪಟಗಳು ಅಥವಾ ನಕ್ಷೆಗಳು ಹಾಗೇ ತಯಾರಿಸಲಾಯಿತು ಎಂದು ಮತ್ತು ಅವು ಸಮರ್ಥವಾಗಿವೆ ಎಂದು ನ್ಯಾಯಾಲಯವು ಪೂರ್ವ ಭಾವನೆಯನ್ನು ಮಾಡತಕ್ಕದ್ದು , ಆದರೆ ಯಾವುದೇ ಕಾರಣದ ಉದ್ದೇಶಗಳಿಗಾಗಿ ರಚಿತವಾದ ಭೂಪಟಗಳು ಅಥವಾ ನಕ್ಷೆಗಳು ಸಮರ್ಪಕವಾಗಿವೆ ಎಂದು ರುಜುವಾತುಪಡಿಸಬೇಕು ಎಂದು ಉಲ್ಲೇಖಿ ಇರುತ್ತದೆ. ಈ ದಾವೆಯಲ್ಲಿ **1** ನೇ ಪ್ರತಿವಾದಿಯು ಸದರಿ ನಿಡಿ-**1** ರ ನಕ್ಷೆಯನ್ನು ತಯಾರಿಸಿರುವ ಅಧಿಕಾರಿಯನ್ನು ಈ ದಾವೆಯಲ್ಲಿ ವಿಚಾರಣೆಗೆ ಒಳಪಡಿಸಿ ಸದರಿ ನಿಡಿ-**1** ರ ದಾಖಲಾತಿಯನ್ನು ರುಜುವಾತುಪಡಿಸಿರುವುದಿಲ್ಲ. ಸದರಿ ನಿಡಿ-**1** ರ ನಕ್ಷೆಯನ್ನು ತಯಾರಿಸುವಾಗ ಸದರಿ ನಕ್ಷೆಯನ್ನು ತಯಾರಿಸಿರುವ ಅಧಿಕಾರಿಯು ಸರಿಯಾದ ರೀತಿಯಲ್ಲಿ ಪ್ರಕ್ರಿಯೆಗಳನ್ನು ಪಾಲನೆ ಮಾಡಿರುತ್ತಾನೋ ಅಥವಾ ಇಲ್ಲವೋ ಎಂಬುದರ ಕುರಿತು ಸದರಿ ಅಧಿಕಾರಿಯ ಸಾಕ್ಷ್ಯವು ಅತ್ಯವಶ್ಯಕವಾಗಿರುತ್ತದೆ. ಹಾಗಾಗಿ ಸದರಿ ನಿಡಿ-**1** ರ ದಾಖಲಾತಿಯ ಆಧಾರದ ಮೇಲೆ ಮಾತ್ರ ವಾದಿಯು **1** ನೇ ಪ್ರತಿವಾದಿಗೆ ಸಂಬಂಧಿಸಿದ **1** ಎಕರೆ ಜಮೀನನ್ನು ಅತಿಕ್ರಮಣ ಮಾಡಿರುತ್ತಾನೆ ಎಂದು ಪರಿಗಣಿಸಲು ಬರುವುದಿಲ್ಲ. ಅದೇ ರೀತಿಯಾಗಿ ಪಿ.ಡಬ್ಲ್ಯೂ-**1** ರವರು ತಮ್ಮ ಪಾಟೀ ಸವಾಲಿನಲ್ಲಿ ಸರ್ವೆ ನಂ: **51/1** ರ ಜಮೀನದರ ಮಾಲೀಕರ ಜಾಗದಲ್ಲಿ ಜಮೀನು ಸರ್ವೆ ನಂ: **51/2** ರ ಮಾಲೀಕರು ಒಂದು ಎಕರೆಯನ್ನು ಅತಿಕ್ರಮಣ ಮಾಡಿರುತ್ತಾರೆಂದು ಬರೆದ ಷರಹ ಸರಿ ಇರುತ್ತದೆ ಎಂದು ನುಡಿದಿರುತ್ತಾರೆ ಎಂಬ ಕಾರಣದಿಂದ ವಾದಿಯು **1** ನೇ ಪ್ರತಿವಾದಿಗೆ ಸಂಬಂಧಿಸಿದ **1** ಎಕರೆ ಜಮೀನನ್ನು ಒತ್ತುವರಿ ಮಾಡಿರುತ್ತಾರೆಂದು ಪರಿಗಣಿಸಲು ಬರುವುದಿಲ್ಲ. ಆದ್ದರಿಂದ ವಾದಿಯು **1** ನೇ ಪ್ರತಿವಾದಿಗೆ ಸಂಬಂಧಿಸಿದ **1** ಎಕರೆ ಜಮೀನನ್ನು ಒತ್ತುವರಿ ಮಾಡಿರುತ್ತಾರೆಂದು **1** ನೇ ಪ್ರತಿವಾದಿಯು ಪ್ರಭಲವಾದ ಮತ್ತು ನ್ಯಾಯಾಲಯವು ನಂಬಬಹುದಾದ ಸಾಕ್ಷ್ಯಾಧಾರಗಳ ಮೂಲಕ ರುಜುವಾತು ಪಡಿಸಲು ವಿಫಲರಾಗಿರುತ್ತಾರೆ.

**36.** ಈ ಮೇಲಿನ ಉಭಯ ಪಕ್ಷಗಾರರ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ವಾದಿಯು ತನ್ನ ಹಾತ ನಕಾಶೆಯಲ್ಲಿ ತೋರಿಸಿದ ಆಸ್ತಿ ಸರ್ವೆ ನಂ: **51/2** ರ ಆಸ್ತಿಯ ಪೂರ್ವಕ್ಕೆ ಓ.ಪಿ ಮತ್ತು ಪಶ್ಚಿಮಕ್ಕೆ

ಎಮ್. ಎನ್ ಒಡ್ಡುಗಳು ಅಸ್ತಿತ್ವದಲ್ಲಿರುತ್ತವೆ ಮತ್ತು ಸದರಿ ಎಮ್.ಎನ್ ಮತ್ತು ಓ.ಪಿ ಒಡ್ಡುಗಳು ದಾವಾ ಆಸ್ತಿ ಸರ್ವೆ ನಂಃ **51/2** ರ ಆಸ್ತಿಯ ಭಾಗಗಳಾಗಿರುತ್ತವೆ ಎಂಬುದನ್ನು ರುಜುವಾತು ಪಡಿಸಲು ವಾದಿಯು ನಿಪಿ-**4** ರಿಂದ **6** ರ ಛಾಯಾ ಚಿತ್ರಗಳನ್ನು ಹೊರತು ಪಡಿಸಿ ಯಾವುದೇ ಸಾಕ್ಷ್ಯಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಹಾಗಾಗಿ ವಾದಿಯು ತನ್ನ ಆಸ್ತಿ ಸರ್ವೆ ನಂಃ **51/2** ರ ಆಸ್ತಿಯ ಪೂರ್ವಕ್ಕೆ ಓ.ಪಿ ಮತ್ತು ಪಶ್ಚಿಮಕ್ಕೆ ಎಮ್. ಎನ್ ಒಡ್ಡುಗಳು ಅಸ್ತಿತ್ವದಲ್ಲಿರುತ್ತವೆ ಮತ್ತು ಸದರಿ ಎಮ್.ಎನ್ ಮತ್ತು ಓ.ಪಿ ಒಡ್ಡುಗಳು ದಾವಾ ಆಸ್ತಿ ಸರ್ವೆ ನಂಃ **51/2** ರ ಆಸ್ತಿಯ ಭಾಗಗಳಾಗಿರುತ್ತವೆ ಎಂಬುದನ್ನು ವಾದಿಯು ಪ್ರಭಲವಾದ ಮತ್ತು ನ್ಯಾಯಾಲಯವು ನಂಬಬಹುದಾದ ಸಾಕ್ಷಾಧಾರಗಳ ಮೂಲಕ ರುಜುವಾತು ಪಡಿಸಲು ವಿಫಲರಾಗಿರುತ್ತಾರೆ .

37. ಈ ಮೇಲೆ ಚರ್ಚಿಸಿದಂತೆ ವಾದಿಯು ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ವಾದ ಪತ್ರದಲ್ಲಿ ಹೇಳಿರುವಂತೆ ತಾನು ದಾವಾ ಆಸ್ತಿ ಸರ್ವೆ ನಂಃ 51/2 ರ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತೇವೆ , ವಾದಿಯು ತನ್ನ ಆಸ್ತಿ ಸರ್ವೆ ನಂಃ **51/2** ರ ಆಸ್ತಿಯ ಪೂರ್ವಕ್ಕೆ ಓ.ಪಿ ಮತ್ತು ಪಶ್ಚಿಮಕ್ಕೆ ಎಮ್. ಎನ್ ಒಡ್ಡುಗಳು ಅಸ್ತಿತ್ವದಲ್ಲಿರುತ್ತವೆ ಮತ್ತು ಸದರಿ ಎಮ್.ಎನ್ ಮತ್ತು ಓ.ಪಿ ಒಡ್ಡುಗಳು ದಾವಾ ಆಸ್ತಿ ಸರ್ವೆ ನಂಃ **51/2** ರ ಆಸ್ತಿಯ ಭಾಗಗಳಾಗಿರುತ್ತವೆ ಎಂಬುದನ್ನು ರುಜುವಾತು ಪಡಿಸಲು ವಾದಿಯು ವಿಫಲರಾಗಿರುವುದು ಕಂಡು ಬರುತ್ತದೆ. ಅದೇ ರೀತಿಯಾಗಿ 1 ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವಂತೆ ತಾನು ದಾವಾ ಆಸ್ತಿ ಸರ್ವೆ ನಂಃ 51/1 ಬಿ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತೇನೆ , 1 ನೇ ಪ್ರತಿವಾದಿಯು ತನಗೆ ಸಂಬಂಧಿಸಿದ 1 ಎಕರೆ ಜಮೀನನ್ನು ವಾದಿ ಒತ್ತುವರಿ ಮಾಡಿರುತ್ತಾರೆ ಎಂಬುದನ್ನು 1 ನೇ ಪ್ರತಿವಾದಿಯು ರುಜುವಾತು ಪಡಿಸಲು ವಿಫಲರಾಗಿರುತ್ತಾರೆ. ಆದ್ದರಿಂದ ಈ ಮೇಲ್ಕಂಡ ವಿಸ್ತೃತವಾದ ಚರ್ಚೆಯಿಂದಾಗಿ ವಿವಾದಾಂಶ ಸಂಖ್ಯೆ 1 ರಿಂದ 3 ಮತ್ತು ವಿವಾದಾಂಶ ಸಂಖ್ಯೆ 5 ಮತ್ತು 6 ನ್ನು ನಕಾರಾತ್ಮಕವೆಂದು ನಿರ್ಣಯಿಸಲಾಗಿದೆ.

**38.** ವಿವಾದಾಂಶ ಸಂಖ್ಯೆ **4, 7** ಮತ್ತು **8**- ಈ ಮೂರು ವಿವಾದಾಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದಲೂ ಮತ್ತು ಇವುಗಳಿಗೆ ನೀಡುವ ಕಾರಣಗಳು ಒಂದೇ ಆಗಿರುವುದರಿಂದಲೂ ಈ ಮೂರು ವಿವಾದಾಂಶಗಳನ್ನು ಒಟ್ಟಿಗೆ ಚರ್ಚಿಸಲಾಗಿರುತ್ತದೆ.

39. ವಾದಿಯು ಈ ದಾವೆಯಲ್ಲಿ ದಾವಾ ಅನುಸೂಚಿತ ಸ್ವತ್ತು ಸರ್ವೆ ನಂ: 51/2 ಆಸ್ತಿಯಲ್ಲಿ ವಾದಿ ಸ್ವಾಧೀನಾನುಭದಲ್ಲಿರುತ್ತಾರೆ ಮತ್ತು ಸರ್ವೆ ನಂ: 51/2 ರ ಆಸ್ತಿಯ ಪಶ್ಚಿಮದ ದಂಡೆಗೆ ಹಾತ ನಕಾಶೆಯಲ್ಲಿ ತೋರಿಸಿದ ಎಮ್. ಎನ್ ಒಡ್ಡನ್ನು 1 ನೇ ಪ್ರತಿವಾದಿಯು ಕಡಿಯುವುದು, ಅದರ ಮೇಲೆ ಬೆಳೆದ ಗಿಡ ಗಂಟೆಗಳನ್ನು ಕಡೆಯದಂತೆ ಮತ್ತು ವಾದಿಯ ಜಮೀನಿನ ಪೂರ್ವ ಬಾಂದಿನಲ್ಲಿರುವ ಹಾತ ನಕಾಶೆಯಲ್ಲಿ ತೋರಿಸಿದ ಓ.ಪಿ ಒಡ್ಡನ್ನು 2 ನೇ ಪ್ರತಿವಾದಿಯು ಕಡಿಯದಂತೆ ಮತ್ತು ಅದರ ಮೇಲೆ ಬೆಳೆದ ಗಿಡ ಗಂಟೆಗಳನ್ನು ನಾಶ ಮಾಡದಂತೆ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿರುತ್ತಾರೆ. 1 ನೇ ಪ್ರತಿವಾದಿಯು ತಮ್ಮ ಎದುರು ಕ್ಲೇಮನಲ್ಲಿ ವಾದಿ ಎಮ್ ಬಾಂದಿನಲ್ಲಿ 1 ನೇ ಪ್ರತಿವಾದಿಯ ಜಮೀನದಲ್ಲಿಯ 1 ಎಕರೆ ಕ್ಷೇತ್ರವನ್ನು ಅತಿಕ್ರಮಣವಾಗಿ ಒತ್ತುವರಿ ಮಾಡಿದ ಜಮೀನನ್ನು 1 ನೇ ಪ್ರತಿವಾದಿಯ ಸ್ವಾಧೀನಕ್ಕೆ ಕೊಡಿಸಬೇಕೆಂದು ಮತ್ತು ವಾದಿಯು ತನ್ನ ಜಮೀನದ ಪಶ್ಚಿಮ ಬಾಂದಿನಲ್ಲಿ ಎಮ್. ಎನ್ ಅಂತ ಗುರುತಿಸಿದ ಜಾಗೆಯಲ್ಲಿ ಯಾವುದೇ ಗಿಡ ಗಂಟೆಗಳನ್ನು ವಾದಿ ಬೆಳೆಸಬಾರದು ಎಂದು ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ನೀಡಿಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

40. ಈ ಕುರಿತು ಪರಿಶೀಲಿಸಲಾಗಿ ಈಗಾಗಲೇ ವಿವಾದಾಂಶ ಸಂಖ್ಯೆ 1 ರಿಂದ 3 ರಂತೆ ವಾದಿಯು ತನ್ನ ವಾದ ಪತ್ರದಲ್ಲಿ ಹೇಳಿರುವಂತೆ ದಾವಾ ಅನುಸೂಚಿತ ಸ್ವತ್ತು ಸರ್ವೆ ನಂ: 51/2 ರ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತೇನೆ, ವಾದಿಯು ತನ್ನ ಆಸ್ತಿ ಸರ್ವೆ ನಂ: **51/2** ರ ಆಸ್ತಿಯ ಪೂರ್ವಕ್ಕೆ ಓ.ಪಿ ಮತ್ತು ಪಶ್ಚಿಮಕ್ಕೆ ಎಮ್**.** ಎನ್ ಒಡ್ಡುಗಳು ಅಸ್ತಿತ್ವದಲ್ಲಿರುತ್ತವೆ ಮತ್ತು ಸದರಿ ಎಮ್**.**ಎನ್ ಮತ್ತು ಓ**.**ಪಿ ಒಡ್ಡುಗಳು ದಾವಾ ಆಸ್ತಿ ಸರ್ವೆ ನಂ: **51/2** ರ ಆಸ್ತಿಯ ಭಾಗಗಳಾಗಿರುತ್ತವೆ ಎಂಬುದನ್ನು ವಾದಿಯು ರುಜುವಾತು ಪಡಿಸಲು ವಿಫಲರಾಗಿರುತ್ತಾರೆಂದು ನಿರ್ಣಯಿಸಲಾಗಿರುತ್ತದೆ. ಹಾಗಾಗಿ ವಾದಿಯು ದಾವೆಯಲ್ಲಿ ಕೋರಿರುವಂತೆ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಪಡೆಯಲು ಅರ್ಹರಾಗಿರುವುದಿಲ್ಲ ಎಂದು ನಿರ್ಣಯಕ್ಕೆ ಬರಲಾಗುತ್ತದೆ.

41. 1 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ 1 ನೇ ಪ್ರತಿವಾದಿಯ ಜಮೀನದಲ್ಲಿಯ 1 ಎಕರೆ ಕ್ಷೇತ್ರವನ್ನು ಅತಿಕ್ರಮಣವಾಗಿ ಒತ್ತುವರಿ ಮಾಡಿದ

ಜಮೀನನ್ನು 1 ನೇ ಪ್ರತಿವಾದಿಯ ಸ್ವಾಧೀನಕ್ಕೆ ಕೊಡಿಸಬೇಕೆಂದು ಮತ್ತು ವಾದಿಯು ತನ್ನ ಜಮೀನದ ಪಶ್ಚಿಮ ಬಾಂದಿನಲ್ಲಿ ಎಮ್. ಎನ್ ಅಂತ ಗುರುತಿಸಿದ ಜಾಗೆಯಲ್ಲಿ ಯಾವುದೇ ಗಿಡ ಗಂಟೆಗಳನ್ನು ವಾದಿ ಬೆಳೆಸಬಾರದು ಎಂದು ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ನೀಡಿಬೇಕೆಂದು ಪರಿಹಾರಗಳನ್ನು ಕೋರಿದ್ದು ಈ ಕುರಿತಾಗಿ ವಿವಾದಾಂಶ ಸಂಖ್ಯೆ 5 ಮತ್ತು 6 ರಂತೆ ರೂಪಿಸಿದ್ದು ಸದರಿ ವಿವಾದಾಂಶಗಳನ್ನು ಸಾಬೀತುಪಡಿಸಲು 1 ನೇ ಪ್ರತಿವಾದಿಯು ವಿಫಲತೆ ಹೊಂದಿದ ಕಾರಣದಿಂದ 1 ನೇ ಪ್ರತಿವಾದಿಯು ಈ ದಾವೆಯಲ್ಲಿ ಕೋರಿರುವ ಯಾವುದೇ ಪರಿಹಾರವನ್ನು ಪಡೆಯಲು ಅರ್ಹರಲ್ಲ ಎಂದು ನ್ಯಾಯಾಲಯ ನಿರ್ಣಯಿಸುತ್ತದೆ. ಈ ಮೇಲ್ಕಂಡ ವಿಸ್ತೃತ ಚರ್ಚೆಯಿಂದಾಗಿ ವಿವಾದಾಂಶ ಸಂಖ್ಯೆ 4, 7 ಮತ್ತು 8 ನ್ನು ನಕಾರಾತ್ಮಕ ಎಂದು ನಿರ್ಣಯಿಸಲಾಗಿದೆ.

42. ವಿವಾದಾಂಶ ಸಂಖ್ಯೆ **9-** ಈ ಮೇಲ್ಕಂಡ ಎಲ್ಲಾ ವಿವಾದಾಂಶಗಳನ್ನು ನಿರ್ಣಯಿಸಲಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ**.**

## ಆದೇಶ

ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ವಜಾ ಮಾಡಲಾಗಿದೆ.

1 ನೇ ಪ್ರತಿವಾದಿಯು ಸಲ್ಲಿಸಿರುವ ಪ್ರತಿ ಮಾಗಣಿಯನ್ನು(counter claim) ವಜಾಗೊಳಿಸಲಾಗಿದೆ.

ಈ ಮೇಲ್ಕಂಡಂತೆ ಡಿಕ್ರಿ ಬರೆಯತಕ್ಕದ್ದು.

(ಈ ತೀರ್ಪನ್ನು ಶೀಘ್ರುಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 08 ನೇ ಜುಲೈ 2026 ರಂದು ನಾನು ಉದ್ಘೋಷಿಸಿದ್ದೇನೆ.)

(ಈರಪ್ಪ ಢವಳೇಶ್ವರ್)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಬಸವನ ಬಾಗೇವಾಡಿ

<u>ಅನುಬಂಧ</u>

<u>ವಾದಿಯರ  ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-</u>

ಪಿ.ಡಬ್ಲ್ಯೂ.1-  ನಿಂಗಪ್ಪ  ತಂದೆ ಲಕ್ಷ್ಮಣ  ಆಲೂರ
ಪಿ.ಡಬ್ಲ್ಯೂ.2- ಭೀಮನಗೌಡ  ತಂದೆ ಲಕ್ಷ್ಮಣ  ಆಲೂರ

<u>ವಾದಿಯರ  ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-</u>

ನಿ.ಪಿ.1-3 -ಪಹಣಿ ಪತ್ರಿಕೆಗಳು
ನಿ.ಪಿ.4-7 -ಛಾಯಾ ಚಿತ್ರಗಳು  ಹಾಗೂ ಒಂದು ಸಿಡಿ

<u>ಪ್ರತಿವಾದಿಯರ  ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-</u>

ಡಿ.ಡಬ್ಲ್ಯೂ.1-  ರಮೇಶ  ತಂದೆ ನಿಂಗೊಂಡಪ್ಪ  ಮುಳವಾಡ

<u>ಪ್ರತಿವಾದಿಯರ  ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-</u>

ನಿ.ಡಿ.1 - ಪಿಟಿ  ಶೀಟ
ನಿ.ಡಿ.2-6 - ಪಹಣಿ ಪತ್ರಿಕೆಗಳು
ನಿ.ಡಿ.7 - ಮ್ಯುಟೇಶನ ರಜಿಸ್ಟರನ ಪ್ರತಿ

1 ನೇ  ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಬಸವನ ಬಾಗೇವಾಡಿ